[MR. SPEAKER in the Chair]

General Discussion on Budget Estimates for the year 1980-81

MR. SPEAKER: Now the Hon. Minister for Finance will reply to debate.

† ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಅರ್ಥ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ೧೯೮೦-೮೧ರ ಸಾಲಿನ ಆಯವ್ಯಯ ಪತ್ರದ ಮೇಲೆ ಸುಮಾರು ೩೩ ಮಂದಿ ಮಾನ್ಯ ಸದಸ್ಯರು ಭಾಗ ವಹಿಸಿ ಒಳ್ಳೆಯ ವಿಸ್ತಾರವಾದಂತಹ ಚರ್ಚೆಯನ್ನು ಮಾಡುತ್ತಾ ಪ್ರಮುಖವಾಗಿ ಕೆಲವು ವಿಮರ್ಶೆಗಳನ್ನು ಕೂಡಾ ಮಾಡಿದ್ದಾರೆ ಆದರೆ ಕೆಲವರು ವಿವೇಕರಹಿತವಾದಂತ ಹಾಗೂ ಧ್ಯೇಯರಹಿತವಾದಂಥ ಮತ್ತು ಯಾವುದೇ ರೀತಿಯಾದ ಗೊತ್ತು ಗುರಿಯನ್ನು ಇಟ್ಟುಕೊಂಡತಹ ರೀತಿಯಲ್ಲಿ ಕೊಟ್ಟಂತಹ ಬಡ್ಜೆಟ್ ಅಲ್ಲವೆಂದು ಹೇಳಿದ್ದಾರೆ. ಎರಡನೆಯದಾಗಿ, ಯಾವುದೇ ರೀತಿಯಾದ ಕಾರ್ಯತತ್ಪರತೆ ಈ ಸರ್ಕಾರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಮೂರನೆಯದಾಗಿ, ಈ ಆಡಳಿತವನ್ನು ಮುಖ್ಯಮಂತ್ರಿಗಳಾಗಿ ಶ್ರೀಮಾನ್ ಗುಂಡೂರಾಯರು ಅಧಿಕಾರ ವಹಿಸಿಕೊಂಡಮೇಲೆ ಇಡೀ ಆಡಳಿತ ಯಂತ್ರಸ್ಥಗಿತವಾಗಿದೆ ಎಂದು ಹೇಳಿದ್ದು ಉಂಟು. ಇನ್ನು ಬೆಲೆ ಏರಿಕೆ ಬಗ್ಗೆ ಹತೋಟಿ ಇಡಲಿಕ್ಕೆ ಆಗಿಲ್ಲ. ಎಂದು ಹೇಳಿ ಕೆಲವು ಐಟೆಂಗಳ ಬಗ್ಗೆ ತೆರಿಗೆ ಹಾಕಿರುವುದು ಸರಿಯಲ್ಲ ಎಂದು ಅನೇಕ ಸದಸ್ಯರು ವಾದಿಸಿದ್ದಾರೆ ಇನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಇರುವ ಆರ್ಥಿಕ ಸಂಬಂಧದ ಬಗ್ಗೆ ಚರ್ಚೆ ಬಂದಿದೆ. ಸರ್ಕಾರ ಆಯವ್ಯಯ ಪತ್ರದ ಮುಖೇನ ಶೇಕಡ ೭೧/೨ ಬೆಳವಣಿಗೆಯನ್ನು ಸಾಧಿಸುತ್ತದೆ ಎಂದು ಹೇಳಿರುವುದರ ಬಗ್ಗೆ ಪ್ರಸ್ತಾಪಿಸಿ ಅದು ಸಾಧ್ಯವಿಲ್ಲವೆಂದೂ, ಸಾಧಿಸುವುದಾದರ ಯಾವ ರೀತಿಯಲ್ಲಿ ಸಾಧಿಸುತ್ತೀರಿ ತಿಳಿಸಿ ಎಂದು ಕೆಲವು ಸದಸ್ಯರು ಪ್ರಶ್ನೆ ಹಾಕಿದ್ದಾರೆ. ಆಯವ್ಯಯ ಪತ್ರದಲ್ಲಿ ತೋರಿಸಿರುವ ಕೊರತೆ ತುಂಬಿಸುವ ವಿಷಯದಲ್ಲಿ ಶಂಕೆಯನ್ನು ಕೂಡಾ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಮಾರ್ಚ್ ೧೦ರಂದು ಈ ಸದನದಲ್ಲಿ ಆಯವ್ಯಯ ಪತ್ರ ಮಂಡಿಸಿದ ಮೇಲೆ ಸಾಕಷ್ಟು ಪ್ರತಿಕ್ರಿಯೆಯನ್ನು ಅನುಕೂಲಕರವಾಗಿಯೂ ಕೆಲವು ಸದಸ್ಯರು ಪ್ರತಿಕೂಲಕರವಾಗಿಯೂ ವ್ಯಕ್ತ ಮಾಡಿದ್ದಾರೆ.

ಅದೇ ಪ್ರಕಾರ ಕೆಲವು ವಿಚಾರಗಳಲ್ಲಿ ಟೀಕೆಗಳನ್ನು ಕೂಡ ಮಾಡಿದ್ದಾರೆ. ಇಡೀ ಆಯವ್ಯಯವನ್ನು ನಾವು ಯಾವುದೇ ಒಂದು ಹಂತದಲ್ಲಾಗಲಿ ಸರಿದುಂಬಿಸಬೇಕಾಗಿದೆ, ಮತ್ತು ಸರಿದೂಗಿಸಬೇಕಾಗಿದೆ. ಇಡೀ ಒಂದು ಆಯವ್ಯಯ ಪತ್ರದ ರೂಪರೇಷೆಗಳನ್ನು ನಮ್ಮ ಒಂದು ನೀತಿಗೆ ಅನುಗುಣವಾಗಿ ರೂಪಿಸಿ ಕೊಂಡು ನಮ್ಮ ಆರ್ಥಿಕ ನೀತಿಯನ್ನು ನಿರೂಪಿಸಬೇಕು. ಮತ್ತು ಇದರಲ್ಲಿ ಯಾವರೀತಿಯ ದೂರದೃಷ್ಟಿ ಇದೆ, ಈ ಆಯವ್ಯಯ ಯಾವ ಒಂದು ದಿಕ್ಕಿನಲ್ಲಿ ಇದೆ ಎನ್ನುವ ಒಂದು ಚಿತ್ರವನ್ನು. ಒಂದು ವರ್ಷದ ಒಳಗೆ ನಾವು ಯಾವುದನ್ನು ಸಾಧಿಸಬಲ್ಲೆವು ಮತ್ತು ನಾವು ಯಾವ ದಾರಿಯಲ್ಲಿ ಹೋಗುತ್ತಿದ್ದೇವೆ ಎನ್ನುವ ಒಂದು ಸ್ಪಷ್ಟವಾದ ಚಿತ್ರವನ್ನು ಸೂಚನೆ ಮಾಡದಿದ್ದರೆ, ನಾವು ಮುಂದುವರಿಯುವುದಕ್ಕೆ ಆಗುವುದಿಲ್ಲ. ಕತ್ತಲಲ್ಲಿ ತಡಕಾಡಿದಂತಾಗುತ್ತದೆ. ಇವತ್ತು ದೇಶದ, ರಾಜ್ಯದ ಬಡತನವನ್ನು ಹೋಗಲಾಡಿಸಲು, ನಿರ್ದಿಷ್ಟವಾದ ನೀತಿಯನ್ನು ರೂಪಿಸುವುದು ನಮ್ಮ ಗುರಿಯಾಗಿದೆ. ಹರಿಜನ ಗಿರಿಜನರ ಮತ್ತು ರೈತರ ಅನೇಕ ವರ್ಗಗಳ ಜನರ ಒಂದು ಸಂಕಷ್ಟಗಳನ್ನು ಪರಿಹಾರ ಮಾಡುವ ದಾರಿಯಲ್ಲಿ ನಿರ್ದಿಷ್ಟವಾದ ನೀತಿಯನ್ನು ರೂಪಿಸತಕ್ಕದ್ದು ಆವಶ್ಯಕ ಇದೆ. ಒಂದು ರೀತಿಯಲ್ಲಿ ನಮ್ಮ ನೀತಿ ಏನು ಎನ್ನುವ ವಿಚಾರಗಳನ್ನು ನೋಡಿಕೊಂಡು ಆ ದಾರಿಯಲ್ಲಿ ನಾವು ಹೋಗು ತ್ತಿದ್ದೇವೆ. ಇದರ ಸ್ಪಷ್ಟ ಚಿತ್ರವನ್ನು ಆಯವ್ಯಯ ಪತ್ರದಲ್ಲಿ ಕಾಣಿಸಿದಂತೆ ನಾವು ರೂಪಿಸಿಕೊಳ್ಳುವು ದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಇದರಲ್ಲಿ ಪ್ರಮುಖವಾಗಿ ಧ್ಯೇಯ ಧೋರಣೆಗಳು, ಮತ್ತು ನಾವು ಹಾಕಿಕೊಂಡ ಸಾಮಾಜಿಕ ಮತ್ತು ಆರ್ಥಿಕ ನೀತಿಯನ್ನು ಮತ್ತು ನಾವು ಮುಂದೆ ನಡೆಸಿಕೊಂಡು ಹೋಗು ವಂತಹ ರಾಜಕೀಯ ಇಚ್ಛಾಶಕ್ತಿಯ ಹಿನ್ನಲೆಯನ್ನು ಕೂಡ ಈ ಆಯವ್ಯಯ ಪತ್ರ ಒಳಗೊಂಡಿದೆ. ಇದನ್ನು ಪರಿಶೀಲನೆ ಮಾಡುವಾಗ ತಮಗೆ ಕಾಣಬಹುದು, ನಾವು ಕತ್ತಲಲ್ಲಿ ತಡಕಾಡುವ ಕೆಲಸ ಮಾಡಿಲ್ಲ. ಬೆಳಕಿನಲ್ಲಿ ಇಡಲಾಗಿದೆ. ರಾಜಕೀಯ ಇಚ್ಛಾಶಕ್ತಿಯು ಇಡೀ ರಾಜ್ಯದಲ್ಲಿ ನಮ್ಮ ರಾಷ್ಟ್ರದಲ್ಲಿ ಇರುವಂತ ರಾಜಕೀಯ ಇಚ್ಛಾಶಕ್ತಿಯ ನಿಚ್ಚಳವಾದ ಬೆಳಕಿನಲ್ಲಿ ಕರ್ನಾಟಕ ರಾಜ್ಯದ ಆರ್ಥಿಕ ಸಾಮಾಜಿಕ ನೀತಿಯನ್ನು ಹಾಕಿಕೊಂಡ ರೂಪರೇಷೆಗಳನ್ನು ರೂಪಿಸಿಕೊಂಡು ದೇಶದ ಜನರ, ರಾಜ್ಯದ ಜನರ ಕಲ್ಯಾಣದ ದೃಷ್ಟಿಯಿಂದ ಕೆಲವು

ನೀತಿಗಳನ್ನು ಹಾಕಿದ್ದೇವೆ. ಒಂದನೆಯದಾಗಿ ಯಾವ ದುರ್ಬಲವರ್ಗದವರು ಇದ್ದಾರೆ ಈ ಜನ ರಾಷ್ಟ್ರೀಯ ವಾಹಿನಿಯಲ್ಲಿ ಬಂದು ಸೇರಬೇಕು. ಅವರು ಬೇರೆ ಬೇರೆ ಕಡೆಗಳಲ್ಲಿ ಇರುವುದನ್ನು ತಡೆಗಟ್ಟಿ ನಿಜವಾದ ರಾಷ್ಟ್ರೀಯ ವಾಹಿನಿಯಲ್ಲಿ ಸೇರಿಕೊಂಡು ಬಾಳುವಂತಹ ವ್ಯವಸ್ಥೆ ಮಾಡಬೇಕೆಂಬುದು ಬವಣೆ ಪಡತಕ್ಕ ಜನರ ಕೈ ಎತ್ತಿಹಿಡಿದು ಅವರ ಆರ್ಥಿಕ ಮತ್ತು ಸಾಮಾಜಿಕವಾದ ಒಂದು ಬೆಳಕನ್ನು ಅವರಿಗೆ ಕೊಟ್ಟು ದಾರಿದೀಪವಾಗಿ ಅವರನ್ನು ರಾಷ್ಟ್ರೀಯ ವಾಹಿನಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ದುರ್ಬಲ ವರ್ಗದವರಿಗೆ, ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದರಲ್ಲೂ ಪ್ರಮುಖವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗವನ್ನು ಹೋಗಲಾಡಿಸಬೇಕು, ಎಂದು ಉತ್ಪನ್ನಗಳ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡು ಅವರಿಗೆ ಹೆಚ್ಚು ಕಾರ್ಯಕ್ರಮ ಗಳನ್ನು ಕೊಡುವ ದಿಶೆಯಲ್ಲಿ ಪ್ರಯತ್ನ ಮಾಡಿದ್ದೇವೆ. ತಮಗೆ ಗೊತ್ತಿದೆ ನಾವು ೨೦ ಅಂಶಗಳ ಕಾರ್ಯ ಕ್ರಮವನ್ನು ನಾವು ನಮ್ಮ ಒಂದು ನೀತಿಯ ಪ್ರಕಾರ ಜಾರಿಗೆ ತರುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿದ್ದೇವೆ ಮುಖ್ಯವಾಗಿ ಇವೊತ್ತು ಜನಗಳಿಗೆ ಜೀವನದ ಭರವಸೆ ಇಲ್ಲದಿದ್ದರೆ ದೇಶದ ರಾಜಕೀಯದಲ್ಲಿ ಭರವಸೆ ಇಲ್ಲದಿದ್ದರೆ ಮನಸ್ಸು ವಿಚಲಿತವಾಗುತ್ತದೆ. ನನ್ನ ಕೆಲವು ಮಿತ್ರರು ಹೇಳಿದರು, ಈ ಸರ್ಕಾರ ರೀತಿಗೆಟ್ಟ ಸರ್ಕಾರ ಪ್ರಜ್ಞೆಗೆಟ್ಟ ಸರ್ಕಾರವೆಂದು. ನಿಮ್ಮ ಸಂಗೀತದಲ್ಲಿ ಶ್ರದ್ಧೆ ಇಲ್ಲ ನಿಮ್ಮ ಅಭ್ಯಾಸದಲ್ಲಿ ಶ್ರದ್ಧೆ ಇಲ್ಲ ಎಂದು ಹೇಳಲಿಲ್ಲ. ಬಡ್ಜೆಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳು ಇಲ್ಲ ಎಂದು ಹೇಳುವ ಪ್ರಸಂಗ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ರೈತಾಪಿ ಜನರಿಗೆ, ದುರ್ಬಲವರ್ಗ ದವರಿಗೆ, ಅವರ ಬೆಳವಣಿಗೆಗೆ ಸುಮಧುರ ಸಂಗೀತವನ್ನು ಕೊಡತಕ್ಕ ಇಪ್ಪತ್ತು ಅಂಶಗಳ ಕಾರ್ಯಕ್ರಮ ವನ್ನು ಮಾಡಿಕೊಂಡು ದುರ್ಬಲವರ್ಗದವರನ್ನು ರಾಷ್ಟ್ರೀಯ ವಾಹಿನಿಗೆ ತರುವ ಪ್ರಯತ್ನ ಮಾಡು ತ್ತಿದ್ದೇವೆ. ಈ ಗ್ರಾಮಾಂತರ ಜನಗಳಿಗೆ, ರೈತರಿಗೆ, ದುರ್ಬಲವರ್ಗದವರಿಗೆ ಸಹಾಯ ಮಾಡಬೇಕು, ಅನುಕೂಲ ಮಾಡಬೇಕು ಎನ್ನುವ ಉದ್ದೇಶದಿಂದ ನಾವು ೨೦ ಅಂಶಗಳ ಕಾರ್ಯಕ್ರಮಗಳಿಗೆ ಪ್ರಾಮು ಖ್ಯತೆಯನ್ನು ಕೊಟ್ಟಿದ್ದೇವೆ. ಕೆಲವು ಮಾನ್ಯ ಸದಸ್ಯರು ಹೇಳಿದರು ಈಗ ಭಾಷಣದಲ್ಲಿ ಪುನಃ ೨೦ ಅಂಶ ಕಾರ್ಯಗಳನ್ನು ಓದಬೇಕಾಗಿ ಬಂದಿದೆ ಎಂದು ಈ ೨೦ ಅಂಶಗಳ ಕಾರ್ಯಕ್ರಮದಿಂದ ಸಾಮಾಜಿಕ ಮತ್ತು ಆರ್ಥಿಕವಾಗಿ ಯಾವ ಸವಲತ್ತುಗಳು ಇವೆ ಅವುಗಳನ್ನು ಜನಗಳಿಗೆ ದೊರಕಿಸಕೊಡಬೇಕು ಎನ್ನುವ ಕಾರ್ಯಕ್ರಮಗಳನ್ನು ಹಾಕಿದಾಗ ಆದರ ಒಂದು ನೀತಿಯ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಸಮಿತಿಗಳನ್ನೂ ನಾವು ಮಾಡಿದ್ದೇವೆ. ಅದಕ್ಕೆ ಇಪ್ಪತ್ತು ಅಂಶಗಳ ಕಾರ್ಯಾಚರಣೆಯ ಸಮಿತಿ ಎಂದು ಹೆಸರು ಕೊಟ್ಟಿದ್ದೇವೆ. ಇದರಲ್ಲಿ ಬಹು ಭಾಗ ಅಂಶಗಳು ನಮ್ಮ ರಾಜ್ಯ ಸರ್ಕಾರದವರೇ ಮಾಡಬೇಕಾದಂತಹ ಕಾರ್ಯಕ್ರಮಗಳು ಈ ೨೦ ಕಾರ್ಯಕ್ರಮಗಳಲ್ಲಿ ಇವೆ. ಬೆಲೆಗಳ ನಿಯಂತ್ರಣ ಮಾಡುವುದರಲ್ಲೂ ಇಡೀ ನಮ್ಮ ದೇಶದ ಸರ್ಕಾರಗಳು ಮಾಡುವಂತಹ ಕಾರ್ಯ ಕ್ರಮ ಇದೆ. ಬೇರೆ ಬೇರೆ ಸಾಮಾಜಿಕ ಕ್ಷೇತ್ರದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ, ಬೆಲೆ ನಿಯಂತ್ರಣದಲ್ಲಿ ೨) ಭೂಸುಧಾರಣಾ ಮಸೂದೆ ೩) ಜನಗಳಿಗೆ ಕೊಳ್ಳುವುದು ಇದೆ. ೧) ನಿಯಂತ್ರಿತ ಬಟ್ಟೆಗಳ ವಿತರಣೆ ತಮ್ಮದೇ ಆದ ಕಾರ್ಯಕ್ರಮವನ್ನು ಹಾಕಿ ವಸತಿಯನ್ನು ಒದಗಿಸುವ ಬಗ್ಗೆ ಜನತಾ ಗೃಹಗಳನ್ನು ಏರ್ಪಾಟು ಮಾಡುವಂಥಾದ್ದು ೪) ಜೀತಪದ್ಧತಿಯನ್ನು ನಿರ್ಮೂಲನ ಮಾಡಿ ಅವರಿಗೆ ಪುನರ್ ವಸತಿಯನ್ನು ನಿರೂಪಿಸತಕ್ಕ ವಿಚಾರ, ೫) ಬಡವನ ಮೇಲೆ ಇರತಕ್ಕ ಸಾಲವನ್ನು ನಿರ್ಮೂಲ ಮಾಡತಕ್ಕ ವಿಚಾರ, ೬) ಭೂಹೀನ ಕೃಷಿಕಾರ್ಮಿಕರಿಗೆ ವೇತನವನ್ನು ಗೊತ್ತು ಮಾಡುವ ವಿಚಾರ, ೭) ನೀರಾವರಿ ಮತ್ತು ಕೃಷಿ ಉತ್ಪನ್ನವನ್ನು ಏರಿಸುವಂತಹ ಕಾರ್ಯಕ್ರಮ ೮) ವಿದ್ಯುಚ್ಛಕ್ತಿ ಉತ್ಪಾದನೆ, ೯) ನೇಕಾರರಿಗೆ ಕೊಡಬೇಕಾದಂತಹ ಕಾರ್ಯಕ್ರಮ Socialisation of urban lands 10) Under-valuation of properties ೧೧) ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಉತ್ಪಾದನೆ ಯನ್ನು ಮಾಡುವಂಥಾದ್ದು, ೧೨) ಕಾರ್ಮಿಕರಿಗೆ ಕೈಗಾರಿಕೆಗಳಲ್ಲಿ ತಮ್ಮ ಪಾಲನ್ನು ಪಡೆಯುವಂಥಾದ್ದು, ೧೩) ದಿನಬಳಕೆಗೆ ಬೇಕಾದಂಥಹ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಡುವಂಥಾದ್ದು ೧೪) ದೊಡ್ಡ ದೊಡ್ಡ ಬ್ಯಾಂಕುಗಳಲ್ಲಿ ಸದಸ್ಯತ್ವ ಪಡೆಯುವುದು, (೩) ಜಾಬ್ ಓರಿಯೆಂಟೆಡ್ ಪ್ರೋಗ್ರಾಮ್ Speedy Transportation of Goods ಹೀಗೆ ನಾವು ಮತ್ತು ಕೇಂದ್ರ ಸರ್ಕಾರದವರು ಕೂಡಿ ಮಾಡಬೇಕಾದ್ದಾದರೂ ಬಹುತೇಕ ಅಂಶಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ನಮ್ಮ ರಾಜ್ಯ ಸರ್ಕಾರ ದವರೇ ಹೆಚ್ಚಿನ ಮಹತ್ವಪಾತ್ರ ವಹಿಸಿಕೊಂಡು ಮಾಡುವಂಥದ್ದಾಗಿದೆ ರಾಜ್ಯದ ದುರ್ಬಲವರ್ಗಗಳವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆ ಎತ್ತುವ ಕಾರ್ಯಕ್ರಮಕ್ಕೆ ಬೆಂಬಲ ಕೊಟ್ಟು ಮಾಡುವ ಕಾರ್ಯ ಕ್ರಮ ಸಂಪೂರ್ಣವಾಗಿ ಆಗಿದೆ. ಇದನ್ನು ಪ್ರಸ್ತಾಪಿಸದೆ ಎಲ್ಲಾ ಕಾರ್ಯಕ್ರಮಗಳನ್ನು ನಾವು ಮಾಡಿಯಾಗಿದೆ

ನೀವು ಮಾಡಬೇಕಾದ್ದು ಏನು ಇಲ್ಲ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ೨೦ ಅಂಶಗಳ ಕಾರ್ಯಕ್ರಮವನ್ನು ನಾವು ಜನಗಳಿಗೆ ಕೊಡದೆ ಅವುಗಳನ್ನು ಕಾರ್ಯಾಚರಣೆಗೆ ತರುವಂತಹ ಕೆಲಸವನ್ನು ಮಾಡದಿದ್ದರೆ ಯಾವ ಒಂದು ವಿಶ್ವಾಸದಿಂದ ಶ್ರೀಮತಿ ಇಂದಿರಾಗಾಂಧಿಯವರನ್ನು ಜನತೆ ಅಧಿಕಾರಕ್ಕೆ ತಂದರೋ ಆ ಉದ್ದೇಶ ಸಫಲವಾಗುವುದಿಲ್ಲ. ಆ ಜನಗಳು ಈ ವಿಷಯಗಳನ್ನು ಅರಿತುಕೊಂಡೇ ಶ್ರೀಮತಿ ಇಂದಿರಾಗಾಂಧಿಯವರನ್ನು ಪುನಃ ಅಧಿಕಾರಕ್ಕೆ ತಂದರು. ಆದುದರಿಂದ ನಾನು ಹೇಳುತ್ತೇನೆ This is relevant to our Government. This is relevent to our party and this is relevent to the mandate of the people which is given twice in the course of these 5 months. ಇದಕ್ಕಾಗಿ ನಾವು ಹೆಚ್ಚು ಮೊತ್ತವನ್ನು ಕೊಟ್ಟಿದ್ದೇವೆ. ಇವುಗಳಲ್ಲಿ Package programme for elimation of poverty ಅನ್ನುವುದೂ ಒಂದು. ಇದನ್ನು ರೂಢಿಸಿಕೊಳ್ಳುವುದಕ್ಕೆ ಸರ್ಕಾರದ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಾಕುತ್ತಿದ್ದೇವೆ ಈ ಕಾರ್ಯಕ್ರಮಗಳ ಬಗೆ ನಾವು ಪಟ್ಟಿ ಮಾಡಿ ಕೊಡಬೇಕಾಗಿಲ್ಲ. ಈಗಾಗಲೇ ಅನೇಕ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದೇನೆ. ಆದರೆ ಈ ಕಾರ್ಯಕ್ರಮಗಳನ್ನು ರೂಢಿಸಿಕೊಳ್ಳುವುದಕ್ಕೆ ಅನೇಕ ಹಂತಗಳಲ್ಲಿ ಅಂದರೆ ಎಸ್. ಎಫ್. ಡಿ. ಎ. ಪ್ರೋಗ್ರಾಂ ಇದೆ. ಎಂಪ್ಲಾಯ್‌ಮೆಂಟ್ ಅಫರೇಷನ್‌ಪ್ರೋಗ್ರಾಂ ಇದೆ, ಇದರ ಜೊತೆಗೆ ರೂರಲ್ ಡೆವಲಪ್‌ಮೆಂಟ್‌ಗೋಸ್ಕರ ಡಿ ಪಿ ಎ ಆರ್ ಪ್ರೋಗ್ರಾಂ ಇದೆ ಈ ಮುಖಾಂತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಯೋಜನೆ ಹಾಕಿದ್ದೇವೆ. ಇದರಿಂದ ಎಷ್ಟರಮಟ್ಟಿಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥಾ ದುರ್ಬಲವರ್ಗದವರಿಗೆ ಮತ್ತು ಕೃಷಿಕರಿಗೆ ಅನುಕೂಲ ದೊರಕುತ್ತಾ ಇದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ಈ ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ಏನು ಇದೆ ಅದಕ್ಕೆ ಇದನ್ನೆಲ್ಲಾ ಕ್ರೋಢೀಕರಣ ಮಾಡಿಕೊಂಡು ತಾಲ್ಲೂಕಾ ಮಟ್ಟದಲ್ಲಿ ಒಂದು ಸಮಿತಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿಗಳನ್ನು ಮಾಡಿ ಅವರು ಇದನ್ನೆಲ್ಲಾ ಕೇಂದ್ರೀಕೃತ ಮಾಡಿಕೊಂಡು ಕೆಲಸ ಮಾಡಬೇಕಾಗಿದೆ. ಆದರೆ ಇದರಿಂದ ಎಷ್ಟರಮಟ್ಟಿಗೆ ಫಲ ದೊರಕುತ್ತದೆ ಎನ್ನುವುದನ್ನು ನೋಡಬೇಕಾಗಿದೆ. ಇದರಿಂದ ಅವರ ಬಡತನ ನಿರ್ಮೂಲವಾಗಿ ಅವರ ಜೀವನ ಮಟ್ಟವನ್ನು ಏರಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನಾವು ಇದಕ್ಕೆ ವಿಶೇಷ ಗಮನಕೊಟ್ಟು ಈ ಕಾರ್ಯಕ್ರಮಗಳಿಗೆ ಹೆಚ್ಚು ಮೊತ್ತವನ್ನು ಈ ಆಯವ್ಯಯ ಪತ್ರದಲ್ಲಿ ಕೊಟ್ಟಿದ್ದೇವೆ. ಬರೇ ಅಂಕಿಸಂಖ್ಯೆಗಳಲ್ಲಿ ಈ ಕಾರ್ಯಕ್ರಮಗಳು ರೂಪಿತವಾಗಬಾರದು ಎಂದು ಮಾಡಿದ್ದೇವೆ. ಈ ಕಾರ್ಯಕ್ರಮಗಳ ಪ್ರಯೋಜನವನ್ನು ನಾವು ನೇರವಾಗಿ ಆ ಜನಗಳಿಗೆ ದೊರಕಿಸಿಕೊಡಬೇಕೆಂಬುದು ನಮ್ಮ ಹಂಬಲವಾಗಿದೆ, ಸರ್ಕಾರದ ಉದ್ದೇಶವೂ ಅದೇ ಆಗಿದೆ.

ಇನ್ನು ಮನೆಗಳು ಇಲ್ಲದೇ ಇದ್ದವರಿಗೆ ಮನೆಗಳನ್ನು ಕಟ್ಟಿಕೊಡತಕ್ಕ ವಿಚಾರದ ಬಗ್ಗೆ ಹೇಳುವುದಾದರೆ ಈ ಬಗ್ಗೆ ಈ ವರ್ಷ ಒಂದು ಲಕ್ಷ ಮನೆಗಳನ್ನು ಕಟ್ಟಿಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರಿಂದ ಸುಮಾರು ಎರಡು ಲಕ್ಷ ಮಂದಿ ಸಹಾಯಪಡೆಯುತ್ತಾರೆ ಎಂದು ಹೇಳುತ್ತೇನೆ. ಅದೇ ಪ್ರಕಾರವಾಗಿ ಈ ಗೇಣಿ ಶಾಸನದಿಂದ ಅಂದರೆ ಈ ಭೂ ಮಸೂದೆಯಿಂದ ಅನೇಕ ಮಂದಿ ತಮ್ಮ ಭೂಮಿಯ ಹಕ್ಕನ್ನು ಶಾಶ್ವತವಾಗಿ ಪಡೆಯುತ್ತಾರೆ. ಇದರಿಂದಲೂ ಸಹ ಎರಡುಲಕ್ಷ ಮಂದಿ ಸಹಾಯ ಪಡೆಯುತ್ತಾರೆ. ಇನ್ನು ಆರ್ಟಿಸಾನ್ಸ್ ಬಗ್ಗೆ ಹೇಳುವುದಾದರೆ ಈಕೆಲಸದಲ್ಲಿ ೨.೫ಲಕ್ಷಜನ ಇದ್ದಾರೆ. ಅವರಿಗೂ ಸಹಾಯವಾಗುವಂಥ ಕಾರ್ಯಕ್ರಮ ಹಾಕಿದ್ದೇವೆ. ಅದೇ ರೀತಿ ೨೦-೩೦ಸಾವಿರ ಜನರು ಬಾಂಡೆಡ್ ಲೇಬರ್ಸ್ ಒಂದು ಲಕ್ಷ ಜನರು ಇದ್ದು ಅವರಿಗೂ ಸಹಾಯವಾಗುವಂಥ ಕಾರ್ಯಕ್ರಮ ಮಾಡಿದ್ದೇವೆ. ಅದೇ ರೀತಿ ಸ್ಲಮ್ ಡ್ವೆಲ್ಲರ್ ಒಂದು ಲಕ್ಷ ಜನ ಇದ್ದಾರೆ, ಅವರೂ ಸಹ ಇದರಿಂದ ಸಹಾಯ ಪಡೆದುಕೊಳ್ಳುತ್ತಾರೆ, ಇದರ ಜೊತೆಗೆ Marginal farmers ಸುಮಾರು ಒಂದು ಲಕ್ಷ ಮಂದಿ ಇದ್ದು ಅವರಿಗೂ ಇದರಿಂದ ಸಹಾಯವಾಗುತ್ತದೆ. ಇದೇ ರೀತಿಯಾಗಿ ಸಹಾಯವನ್ನು ಭೂರಹಿತ ಕೃಷಿಕರು ಮುಂತಾದವರು ಪಡೆದುಕೊಳ್ಳುತ್ತಾರೆ. ಒಟ್ಟು ಎಲ್ಲರನ್ನೂ ಸೇರಿಸಿದರೆ ೧೦ ಲಕ್ಷ ಮಂದಿಯಾಗುತ್ತಾರೆ. ಈ ಕುಟುಂಬಗಳಿಗೆಲ್ಲಾ ಇದರಿಂದ ಸಹಾಯ ವಾಗುತ್ತದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮನೆಗಳನ್ನು ಕಟ್ಟಿಸುವ ಒಂದೇ ಕೆಲಸವಲ್ಲದೆ ಮನೆಗಳು ಯಾರಿಗೆ ಇಲ್ಲ ಎಂಬುದನ್ನು ಗುರುತಿಸಿ, ಅವರ ಒಂದು ಆರ್ಥಿಕ ಮಟ್ಟವನ್ನು ಹೆಚ್ಚಿನ ಲೆಕ್ಕ ಮತ್ತು ಮನೆಗಳಿಗೆ ಬೇಕಾದಂತಹ ಸಹಾಯವನ್ನು ಡಿ ಐ ಆರ್ ಪ್ರೋಗ್ರಾಂ ಮುಖಾಂತರ ಮಾಡುವುದಲ್ಲದೆ ಕೆಲವು ಸಾಲಗಳನ್ನೂ ಸಹ ಬೇರೆ ರೀತಿಯಾಗಿ ಕೊಡಿಸಿದ್ದೇವೆ. ಯಾರು ಹೆಚ್ಚು ಉತ್ಪತ್ತಿ ಇಲ್ಲದೇ ಬಹಳ ಬಡತನದಲ್ಲಿದ್ದಾರೆ ಅಂಥವ

ವರನ್ನೆಲ್ಲಾ ಗುರುತಿಸಿ ಅವರಿಗೆ ಸಂಪೂರ್ಣವಾದ ಸಹಾಯವನ್ನು ಕೊಟ್ಟು ಅವರು ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಅಭಿವೃದ್ಧಿ ಹೊಂದುವಂತೆ ಏನೆಂದರೆ ವಿಶೇಷವಾದ ಒಂದು ಯೋಜನೆ ಹಾಕಿಕೊಂಡಿದ್ದೇವೆ. ನಮ್ಮ ಈ ವರ್ಷದ ಒಂದು ಗುರಿ, ಈ ೨೦ಅಂಶಗಳ ಕಾರ್ಯಕ್ರಮದ ಮುಖಾಂತರ ಬಡಜನರ ಏಳಿಗೆ ಮಾಡಬೇಕೆಂಬುದು ಈ ದಿಸೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಗಳು ಸಾರ್ವತ್ರಿಕವಾಗಿ ಕೆಲಸ ಮಾಡುವ ಹಾಗೆ ಅದರ ಮೇಲೆ ಜಿಲ್ಲಾ ಮಟ್ಟದ ಸಮಿತಿಗಳು ಇರುತ್ತವೆ. ಅದರ ಮೇಲೆ ರಾಜ್ಯ ಮಟ್ಟದ ಸಮಿತಿಗಳು ಇರುತ್ತವೆ. ಇವುಗಳು ಒಂದಕ್ಕೊಂದು ತಮ್ಮ ಕಾರ್ಯಕ್ರಮವನ್ನು ರೂಪಿಸಿಕೊಂಡು ಆ ಬಡಜನಗಳ ಒಂದು ಭವಿಷ್ಯವನ್ನು ರೂಪರೇಷೆಗಳನ್ನೂ ಮಾಡುವ ಸಲುವಾಗಿ ಚೆನ್ನಾಗಿ ಕೆಲಸ ಮಾಡಬೇಕು ಎಂದು ಯೋಜನೆ ಹಾಕಿಕೊಂಡಿದ್ದೇವೆ. ಆದಕ್ಕೆ ಸರ್ಕಾರವೂ ಕೂಡ ಬದ್ಧವಾಗಿದೆ ಅದರ ಪ್ರಕಾರ ನಾವು ಕೂಡ ಅವರ ಒಂದು ಆರ್ಥಿಕ ಮತ್ತು ಸಮಾಜಿಕದ ಸಾಧನೆಗೆ ಏನೇನು ಸಹಾಯ ಬೇಕೊ ಅದನ್ನು ಖಂಡಿತವಾಗಿಯೂ ಮಾಡಿಕೊಡಬೇಕೆಂದು ತೊಡಗಿದ್ದೇವೆ.

ಇನ್ನು ಎರಡನೆಯದಾಗಿ ನಮ್ಮ ದೇಶದಲ್ಲಿ ಹೆಚ್ಚು ಉತ್ಪಾದನೆ ಮಾಡಲಿಕ್ಕಾಗಿ ನೀರಾವರಿಗೆ, ವಿದ್ಯುತ್‌ಗೆ ಮತ್ತು ವ್ಯವಸಾಯದ ಬಾಬಿಗೆ ಹೆಚ್ಚು ಮೊತ್ತವನ್ನು ಕೊಟ್ಟಿದ್ದೇವೆ. ಇದು ಹೆಚ್ಚಾಗಿ ಅಭಿವೃದ್ಧಿಯಾಗಬೇಕು ಎನ್ನುವ ಒಂದು ಹಾದಿಯಲ್ಲಿ ನಾವು ಈ ವಿದ್ಯುಚ್ಛಕ್ತಿ ನೀರಾವರಿ ಮತ್ತು ವ್ಯವಸಾಯಕ್ಕೆ ಒಟ್ಟು ೪೧೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ, ಇದರಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಾವರಿಗೆ ೨೭೧ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರ ಬಗ್ಗೆ ನಮ್ಮ ಮಿತ್ರರು ಸಾಕಷ್ಟು ವ್ಯಾಖ್ಯಾನ ಮಾಡಿದ್ದಾರೆ. ಏನೆಂದರೆ ಕಳೆದ ವರ್ಷವೂ ಕೂಡ ಇದಕ್ಕೆ ೩೮೨ ಕೋಟಿ ರೂಪಾಯಿಗಳನ್ನು ಒದಗಿಸಿತ್ತು, ಈ ವರ್ಷ ನೀವೇನು ಹೆಚ್ಚು ಮಾಡಿದ್ದೀರಿ ಎಂದು ಹೇಳಿದರು. ಈ ಬೆಲೆಯಲ್ಲಿ ಯಾವ ಒಂದು ನಿರ್ವಹಣೆಯನ್ನು ಮಾಡಿಲ್ಲ ಮತ್ತು ಈ ಇನ್‌ಫ್ಲೇಷನರಿ ಏನು ಇದೆ ಅದರ ಬಗ್ಗೆಯೂ ಏನೂ ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ನಾನು ಹೇಳುವುದು ಇಷ್ಟೆ. ಬರೀ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಹೆಚ್ಚಿಗೆ ಈ ಬಡ್ಜೆಟ್ಟಿನಲ್ಲಿ ಹೋದವರ್ಷಕ್ಕಿಂತ ಒದಗಿಸಿ ಕೊಟ್ಟಿದ್ದಾರೆ. ಮತ್ತೆ ಬೇರೆ ಏನೂ ಮಾಡಿಲ್ಲ ಎಂದು ನಮ್ಮ ಮಾನ್ಯ ಮಿತ್ರರು ಮಾತನಾಡಿದ್ದಾರೆ. ತಮಗೆ ಹೇಳಬೇಕಾದರೆ ಕಳೆದ ಸಾರಿ ಈ ೩೮೨ ಕೋಟಿ ರೂಪಾಯಿ ಕೊಟ್ಟಿದ್ದರಲ್ಲಿ ೧೯೭೯-೮೦ ರಲ್ಲಿ ಖರ್ಚು ಮಾಡಿರುವುದು ೩೩೦ ಕೋಟಿ ರೂಪಾಯಿ ಮಾತ್ರ. ನಾನು ಅದರ ಬಗ್ಗೆ ಟೀಕೆ ಮಾಡುವುದಿಲ್ಲ. ಕಳೆದ ವರ್ಷ ಈ ೩೩೦ ಕೋಟಿ ರೂಪಾಯಿಗಳನ್ನು ಈ ಯೋಜನೆಗಳಿಗಾಗಿ ಏನು ವೆಚ್ಚ ಮಾಡಿದ್ದಾರೆ ಅದನ್ನು ಗಣನೆಗೆ ತೆಗೆದುಕೊಂಡಾಗ ನಾವು ರೂಪಿಸತಕ್ಕಂಥಾ ಕಾರ್ಯಕ್ರಮ ಏನು ಇದೆ ಅದು ವ್ಯವಹಾರಿಕವಾಗಿದೆ ಎಂದು ಹೇಳುತ್ತೇನೆ. ಇದು ಜಾರಿಗೊಳಿಸುವಂಥಾ ಒಂದು ಕಾರ್ಯಕ್ರಮವಾಗಿದೆ ಎಂದು ತಿಳಿದುಕೊಂಡೇ ಈ ಬಗ್ಗೆ ಈ ವರ್ಷಕ್ಕೆ ೪೧೮ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ಅಲ್ಲದೆ ಇದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಾವು ಸುಮಾರು ೮೫ ಕೋಟಿ ರೂಪಾಯಿಗಳನ್ನು ಸಾಮುದಾಯಿಕ ಮತ್ತು ಸಾಮಾಜಿಕ ಸೇವೆಗಳಿಗಾಗಿ ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಇದರಿಂದ ಸುಮಾರು ಶೇಕಡ ೭½ ಯಷ್ಟು ಬೆಳವಣಿಗೆಯಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅಭಿವೃದ್ಧಿಯನ್ನು ಸಾಮಾಜಿಕವಾಗಿ ನ್ಯಾಯಸಮ್ಮತವಾಗಿ ನಡೆಸಿಕೊಂಡು ಹೋದರೆ ಮಾತ್ರ ನಮ್ಮ ಸಮಾಜದಲ್ಲಿ ಅಂದರೆ ಸಮಾಜದಲ್ಲಿ ಕೆಳಗಿರತಕ್ಕ ಹಿಂದುಳಿದ ವರ್ಗದ ಜನಗಳಿಗೆ ಉಪಯೋಗವಾಗುತ್ತದೆ. ಇಲ್ಲದೇಹೋದರೆ ಏನಾಗುತ್ತದೆ ಎಂದರೆ ಇದರ ಲಾಭವನ್ನು ಬೇರೆಯವರು ಪಡೆದುಕೊಳ್ಳುತ್ತಾರೆ. ಇದನ್ನು ತಾವು ಯೋಚನೆ ಮಾಡಿ ಈ ಒಂದು ಕಾರ್ಯಕ್ರಮದ ಅಭಿವೃದ್ಧಿಯ ತಳಹದಿಯಮೇಲೆ ಆ ವರ್ಗದವರು ತಮ್ಮ ಜೀವನವನ್ನು ಸುಂದರವಾಗಿ ನಡೆಸಿಕೊಳ್ಳುವಂತಾಗಲು ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಏನು ಸಹಾಯ ಮಾಡಬೇಕೋ ಅದನ್ನು ಮಾಡಿಕೊಟ್ಟಿದ್ದೇವೆ. ಆದುದರಿಂದಲೇ ಈ ಒಂದು ಪ್ರಮುಖವಾದಂಥ ಯೋಜನೆಯನ್ನು ಆರಿಸಿ, ಈ ಸಾಮುದಾಯಿಕ ಮತ್ತು ಸಾಮಾಜಿಕ ಸೇವೆಗಳಿಗಾಗಿ ಈ ವರ್ಷ ೮೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ.

ಇನ್ನೊಂದು ವಿಶೇಷವಾದ ಪರಿಸ್ಥಿತಿ ಏನೆಂದರೆ ಪ್ರಧಾನವಾಗಿ ನಗರಗಳಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಇರತಕ್ಕಂಥಾ ಸಾಮರಸ್ಯ ಬಗ್ಗೆ ಮಾನ್ಯ ಸದಸ್ಯರು ನಗರಗಳಲ್ಲಿ ಹೆಚ್ಚು ಆದಾಯ

ಬರುತ್ತದೆ ಎಂದು ಅಲ್ಲಿಗೆ ಹೆಚ್ಚು ಖರ್ಚು ಮಾಡುತ್ತೀರಿ, ಆದರೆ ಅದೇ ರೀತಿಯಾಗಿ ಅದೇ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗ ಮಾಡುತ್ತಾ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಇದರ ಬಗ್ಗೆ ಒಂದು ಸಮಾನತೆಯನ್ನು. ಸಾಮರಸ್ಯತೆಯನ್ನು ಸ್ಥಾಪನೆ ಮಾಡಬೇಕು ಎನ್ನುವ ಒಂದು ವಿಶೇಷ ಕಾರ್ಯಕ್ರಮ ರೂಪಿಸಿಕೊಂಡಿದ್ದೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನು ಗ್ರಾಮಾಭಿವೃದ್ಧಿ ವಿಚಾರವಾಗಿ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುತ್ತಾ ಇರುವುದರ ಬಗ್ಗೆ ಕೆಲವು ಮಿತ್ರರು ವ್ಯಾಖ್ಯಾನ ಮಾಡಿದ್ದಾರೆ. ೩/೧ ಭಾಗದಷ್ಟು ಹಣವನ್ನು ನಗರಗಳ ಅಭಿವೃದ್ಧಿಗಾಗಿ ವಿನಿಯೋಗ ಮಾಡುತ್ತೀರಿ, ೩/೨ ಭಾಗದಷ್ಟು ಹಣವನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಖರ್ಚು ಮಾಡುತ್ತೀರಿ ಇದು ಹೇಗೆ ಸಾಧ್ಯ ಎನ್ನುವ ಪ್ರಶ್ನೆಗಳನ್ನು ಹಾಕಿದ್ದಾರೆ. ಈ ಬಗ್ಗೆಯೂ ಸಹ ವಿಶೇಷವಾದಂಥಾ ಒಂದು ಕಾರ್ಯಕ್ರಮವನ್ನು ಹಾಕಿ ಇದನ್ನು ಸರಿಪಡಿಸಲು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದೇವೆ. ಇದು ಬರೀ ಆಯವ್ಯಯದ ಭಾಷಣವಾಗಿಲ್ಲ ಎಂದು ಹೇಳುತ್ತೇನೆ. ಈ ಆಯವ್ಯಯ ಪತ್ರ ಹೇಗೆ ಇದೆ ಎಂದರೆ ಪ್ರತಿಯೊಂದು ಹಂತದಲ್ಲೂ ಸಹ ಈ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಒಂದು ಪ್ರಮುಖವಾದ ಪ್ರಯತ್ನ ವನ್ನು ಮಾಡಬೇಕೆಂದು ಮಾಡಿರುವುದಲ್ಲದೆ ಆ ದಿಶೆಯಲ್ಲಿ ನಾವು ಹೋಗಬೇಕು ಎನ್ನುವ ನಿಶ್ಚಯ ವನ್ನೂ ಸಹ ಮಾಡಿದ್ದೇವೆ.

ಈ ಒಂದು ದಿಶೆಯಲ್ಲಿ ನಾವು ಈ ೧೯೮೦–೮೧ನೇ ಸಾಲಿನ ೪೧೮ಕೋಟಿ ರೂಪಾಯಿಗಳ ಪೈಕಿ ಸುಮಾರು ೨೬೭ ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಖರ್ಚು ಮಾಡ ಬೇಕೆಂದಿದ್ದೇವೆ. ಸಾಧಾರಣವಾಗಿ ಇದು ೬೪ ಪರ್ಸೆಂಟ್ ಆಗುತ್ತದೆ. ಇದು ಸಾಲದು, ಇದು ೮೦ ಪರ್ಸೆಂಟ್ ಆಗಬೇಕೆಂಬುದೇ ನಮ್ಮ ಕನಸಾಗಿರುವುದು. ಇನ್ನುಳಿದ ೨೦ ಪರ್ಸೆಂಟ್ ಹಣವನ್ನು ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂಬುದೇ ನಮ್ಮ ಗುರಿಯಾಗಿದ್ದರೂ ಸಹ ಇದನ್ನು ಈ ವರ್ಷದಿಂದಲೇ ಸಾಧಿಸುವುದಕ್ಕಾಗುವುದಿಲ್ಲ. ಒಮ್ಮೆಲೇ ಇದನ್ನು ಸಾಧಿಸಲು ಹೊರಟರೆ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ಬರಬಹುದು. ಈ ಭಾಗ ಗಳಿಗೂ ಶುಚಿಯಾದ ನೀರನ್ನು ಒದಗಿಸುವ ಹೊಣೆ ಸರ್ಕಾರದ್ದು ಇದೆ. ಜೊತೆಗೆ ಈ ಪಟ್ಟಣ ಪ್ರದೇಶಗಳಲ್ಲಿಯೂ ಸಹ ಹಿಂದುಳಿದ ವರ್ಗದವರು ಮತ್ತು ಹರಿಜನ ಮತ್ತು ಗಿರಿಜನರು ವಾಸ ಮಾಡುತ್ತಿ ರುವುದರಿಂದ ಅವರ ಅಭಿವೃದ್ಧಿ ಬಗ್ಗೆ ನಾವು ಕೆಲಸಗಳನ್ನು ಮಾಡಬೇಕಾಗುತ್ತದೆ, ಆದರೂ ಸಹ ನಾವು ಬರುವ ವರ್ಷ ೭೦ ಪರ್ಸೆಂಟ್ ವರೆಗಾದರೂ ಹಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಖರ್ಚು ಮಾಡು ವಂತಹ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಈ ರೀತಿಯಿಂದ ಸ್ವಲ್ಪಸ್ವಲ್ಪವಾಗಿ ಹೆಚ್ಚಿಸುತ್ತಾ, ಇನ್ನು ೫ ವರ್ಷರೊಳಗೆ ೮೦ ಪರ್ಸೆಂಟ್ ಹಣವನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ತೊಡಗಿಸು ವಂತಹ ಒಂದು ಆರ್ಥಿಕ ಚಿತ್ರವನ್ನು ಕಾಣುವಂತಹ ಸೌಭಾಗ್ಯ ನಮ್ಮದಾಗಿದೆ. ಈಗ ಸಧ್ಯಕ್ಕೆ ೬೪ ಪರ್ಸೆಂಟ್ ವರೆಗೆ ಇದನ್ನು ಸಾಧಿಸಿದ್ದೇವೆ.

ಇನ್ನು ಈ ಬಡ್ಜೆಟ್‌ನ್ನು ಅವಸರವಸರವಾಗಿ ಸಿದ್ಧಪಡಿಸಲಾಗಿದೆ ಎಂದು ಕೆಲವರು ಹೇಳಿದ್ದಾರೆ ಆದರೆ ಅದು ಸರಿಯಲ್ಲ. I must tell this House that I have spent nearly 4 hours with each Heads of Department before this budget was prepared. I have discussed with them all the important points relating to development programmes. ಹೀಗೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿ ಒಂದು ಒಳ್ಳೆಯ ತಳಹದಿಯ ಮೇಲೆ ಇದನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಬಹುದು.

ಇನ್ನು ಪ್ರಾದೇಶಿಕ ಸಮತೋಲನದ ವಿಚಾರದಲ್ಲಿ ಕೂಡ ನಾವು ವಿಶೇಷವಾದಂಥ ಮಹತ್ವ ಕೊಟ್ಟು ಈ ಬಡ್ಜೆಟ್‌ನ್ನು ತಯಾರು ಮಾಡಿದ್ದೇವೆ. ೧೯೭೫–೭೬ ರಲ್ಲಿ ಪ್ರಮುಖವಾಗಿ ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗುಲ್ಬರ್ಗ, ಹಾಸನ, ಕೋಲಾರ, ಮಂಡ್ಯ, ರಾಯಚೂರು ಹಾಗೂ ತುಮಕೂರು ಜಿಲ್ಲೆಗಳು ಇಡೀ ರಾಜ್ಯದ ಸರಾಸರಿ ಆದಾಯಕ್ಕಿಂತ ಕೆಳಮಟ್ಟದಲ್ಲಿದ್ದವು. ಅಂದರೆ ಪರ್–ಕ್ಯಾಪಿಟಾ ಇನ್‌ಕಂನಲ್ಲಿ ಹಿಂದೆ ಇದ್ದವು. ಮತ್ತೆ ೧೯೭೭–೭೮ರಲ್ಲಿಯೂ ಸಹ ಬೆಳಗಾಂ, ಬಳ್ಳಾರಿ, ಬೀದರ್

ಬಿಜಾಪುರ,ಚಿತ್ರದುರ್ಗ ಧಾರವಾಡ,ಗುಲ್ಬರ್ಗ,ಕೋಲಾರ,ಮಂಡ್ಯ,ರಾಯಚೂರು ಮತ್ತು ತುಮಕೂರು ಜಿಲ್ಲೆಗಳು೧೯೭೫-೭೬ರಲ್ಲಿಯಾವ ಒಂದು ಅಸಮಾನತೆಯಲ್ಲಿ ಇದ್ದವೋ,ಅದೇಪರಿಸ್ಥಿತಿ ಮುಂದುವರೆಯಿತು. ಇದನ್ನು ಹೋಗಲಾಡಿಸುವುದಕ್ಕೆ ನಾವು ಏನು ಮಾಡಿದ್ದೇವೆಂದರೆ ೫೦ ಪರ್ಸೆಂಟ್ ವೈಟೇಜ್ ಕೊಡುವುದರ ಮೂಲಕ ಯಾವ ರೀತಿಯಿಂದ ಇವು ಹಿಂದುಳಿದಿವೆ ಎಂಬುದನ್ನು ಲೆಕ್ಕ ಹಾಕಿಕೊಂಡು ಈ ಒಂದು ಅಸಮತೋಲನವನ್ನು ಅಳೆಯಲು ಪ್ರಯತ್ನ ಮಾಡಿ ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಿದ್ದೇವೆ. ಮತ್ತು ಈ ಒಂದು ಆಧಾರದ ಮೇಲೆ ಈ ಸಲ ಆಯಾ ಜಿಲ್ಲಾ ಪ್ಲಾನ್‌ನಲ್ಲಿ ಹಣವನ್ನು ಒದಗಿಸಿದ್ದೇವೆ. ಈ ಬಗ್ಗೆ ವಿವರಗಳನ್ನು ಕೊಡಬೇಕೆಂದರೆ, ಬೆಂಗಳೂರು ಅರ್ಬನ್ ಏರಿಯಾಕ್ಕೆ ೪.೪ ಕೋಟಿ ರೂ. ಗಳನ್ನು ಬೆಂಗಳೂರು ರೂರಲ್ ಏರಿಯಾಕ್ಕೆ ೫.೨ ಕೋಟಿ ರೂ, ಗಳನ್ನು,ಬೆಳಗಾಂಗೆ ೫.೪ ಕೋಟಿ ರೂ, ಗಳನ್ನು ಬಳ್ಳಾರಿಗೆ ೫.೩ ಕೋಟಿ ರೂ. ಗಳನ್ನು, ಬೀದರಿಗೆ ೩.೮ ಕೋಟಿ ರೂ. ಗಳನ್ನು ಬಿಜಾಪುರಕ್ಕೆ ೫ ೩ ಕೋಟಿ ರೂ. ಗಳನ್ನು, ಚಿಕ್ಕಮಗಳೂರಿಗೆ ೩.೯ ಕೋಟಿ ರೂ. ಗಳನ್ನು ಚಿತ್ರದುರ್ಗಕ್ಕೆ ೪.೬ ಕೋಟಿ ರೂ. ಗಳನ್ನು, ದಕ್ಷಿಣಕನ್ನಡ ಜಿಲ್ಲೆಗೆ ೫.೬ ಕೋಟಿ ರೂ. ಗಳನ್ನು, ಧಾರವಾಡಕ್ಕೆ ೬.೩ ಕೋಟಿ ರೂ. ಗಳನ್ನು, ಗುಲ್ಬರ್ಗಕ್ಕೆ ೫.೬ ಕೋಟಿ ರೂ. ಗಳನ್ನು, ಹಾಸನಕ್ಕೆ ೩.೩ ಕೋಟಿ ರೂ. ಗಳನ್ನು, ಕೊಡಗಿಗೆ ೨.೫ ಕೋಟಿ ರೂ. ಗಳನ್ನು, ಕೋಲಾರಕ್ಕೆ ೪.೫ ಕೋಟಿ ರೂ. ಗಳನ್ನು, ಮಂಡ್ಯಕ್ಕೆ ೩.೧ ಕೋಟಿ ರೂ. ಗಳನ್ನು, ಮೈಸೂರಿಗೆ ೪.೭ ಕೋಟಿ ರೂ ಗಳನ್ನು ರಾಯಚೂರಿಗೆ ೪.೨ ಕೋಟಿ ರೂ, ಗಳನ್ನು, ಶಿವಮೊಗ್ಗಕ್ಕೆ ೪.೧ ಕೋಟಿ ರೂ, ಗಳನ್ನು, ತುಮಕೂರಿಗೆ ೪.೫ ಕೋಟಿ ರೂ. ಗಳನ್ನು, ಉತ್ತರಕನ್ನಡಕ್ಕೆ ೫.೦ ಕೋಟಿ ರೂ. ಗಳನ್ನು ಒದಗಿಸಿದ್ದೇವೆ. ಇದೇರೀತಿಯಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗಳಿಗೆ ಹಣವನ್ನು ಒದಗಿಸುವಾಗ ಸಹ ಇಲ್ಲಿಯವರೆಗೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಯೋಜನೆಗಳನ್ನು ಕೈಕೊಳ್ಳಲಾಗಿದೆ, ಎಷ್ಟು ಹಣ ಒದಗಿಸಲಾಗಿದೆ ಎಂಬುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು, ಅಂದರೆ ಶಾಸ್ತ್ರೀಯವಾದಂಥ ಒಂದು ಕಲ್ಪನೆಯನ್ನು ಮಾಡಿಕೊಂಡು, ಹಣವನ್ನು ಒದಗಿಸಿದ್ದೇವೆ. ಈ ಮೊದಲು ಯಾವ ಯಾವ ಜಿಲ್ಲೆಗಳಿಗೆ ಅತಿ ಹೆಚ್ಚು ಹಣ ಒದಗಿಸಲಾಗಿತ್ತು, ಯಾವ ಯಾವ ಜಿಲ್ಲೆಗಳಿಗೆ ಕಡಿಮೆ ಹಣ ಒದಗಿಸಲಾಗಿತ್ತು ಎಂಬುದನ್ನೆಲ್ಲಾ ನೋಡಿಕೊಂಡು, ಅದರ ಒಂದು ಆಧಾರದ ಮೇಲೆ ಹಣ ಒದಗಿಸಿದ್ದೇವೆ. ರಸ್ತೆಗಳ ವಿಚಾರದಲ್ಲಿಯೂ ಸಹ ಇದೇ ರೀತಿ ಮಾಡಿದ್ದೇವೆ. ಹೈದರಾಬಾದ್ ಕರ್ನಾಟಕ ಪ್ರದೇಶವು ಹಿಂದುಳಿದಿ ಎಂಬ ವಿಚಾರವೂ ಸಹ ಇಲ್ಲಿ ಬಂತು. ಈ ಭಾಗವು ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೫೬ನೇ ಇಸವಿಯಲ್ಲಿಯೇ ಸೇರಿದ್ದರೂ ಸಹ, ಆ ಭಾಗವು ನಾನಾ ಕಾರಣಗಳಿಂದ ಮುಂದೆ ಬಂದಿಲ್ಲ. ಇದಕ್ಕಾಗಿ ನಾನು ಈಗ ಯಾರನ್ನೂ ದೂಷಣೆ ಮಾಡುತ್ತಿಲ್ಲ. ಇದಕ್ಕೆ ಐತಿಹಾಸಿಕ ಕಾರಣಗಳಿರಬಹುದು, ಇಲ್ಲದೇ ಇನ್ನಿತರ ಕಾರಣಗಳಿರಬಹುದು, ಒಟ್ಟಿನಲ್ಲಿ ಆ ಭಾಗದ ಜಿಲ್ಲೆಗಳು ಬೇರೆ ಜಿಲ್ಲೆಗಳ ಜೊತೆಯಲ್ಲಿ ಸೇರಲು ಸಾಧ್ಯವಾಗಿಲ್ಲ. ಸಾಕಷ್ಟು ಅಸಮತೋಲನ ಇದೆ ಎಂಬುದನ್ನು ಸರ್ಕಾರ ಕಂಡುಕೊಂಡಿದೆ. ಆದಕಾರಣ ಸರ್ಕಾರದವರು ಕೈಕೊಳ್ಳುವಂತಹ ಅನೇಕ ಯೋಜನೆಗಳ ಫಲ ಆ ಭಾಗದವರಿಗೂ ಸಿಕ್ಕುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇಂತಹ ಕಪ್ಪುಛಾಯೆಗಳನ್ನು ಗುರುತಿಸಿದಾಗ ಮಾತ್ರ ಎಲ್ಲ ರೀತಿಯ ಅನುಕೂಲಗಳನ್ನು ಒದಗಿಸಿ ಕೊಡಲು ಸಾಧ್ಯವಾಗುತ್ತದೆ. ಆ ರೀತಿ ಕೊಟ್ಟಾಗ ಅವರಿಗೂ ನಮ್ಮ ಯೋಜನೆಗಳ ಫಲಸಿಗುತ್ತದೆ. ನಾವು ಎಲ್ಲಾಕಡೆ ಹಿಂದುಳಿದ ವರ್ಗದ, ಜನರಿದ್ದಾರೆ, ಎಲ್ಲಾ ವರ್ಗದವರಲ್ಲೂ ಈ ತರಹದ ಜನರು ಇದ್ದಾರೆ ಎಂದು ಹೇಳಿದ ಮಾತ್ರಕ್ಕೆ ಅವರನ್ನು ನಾವು ಗುರುತಿಸಿದಂತೆ ಆಗಲಿಲ್ಲ. ಹಾವನೂರ್ ಕಮಿಷನ್ ಆಗಲೀ, ಈಗ ಕೇಂದ್ರ ಸರ್ಕಾರದವರು ಮಾಡಿರತಕ್ಕಂಥ ಮಂಡಲ್ ಕಮಿಟಿಯವರಾಗಲೀ ದೇಶದಲ್ಲಿ ಸಾಮಾಜಿಕವಾಗಿ ಇರತಕ್ಕಂಥ ಈ ಹಿಂದುಳಿದ ವರ್ಗದವರನ್ನು ಕಪ್ಪು ಛಾಯೆಗಳೆಂದು ಕರೆದಿದ್ದಾರೆ. ಸಮಾಜಕಲ್ಯಾಣ ಇಲಾಖೆಯ ನಕಾಶೆಯಲ್ಲಿ ಕೂಡ ಭೂಗೋಳಿಕವಾಗಿ ಈ ಕಪ್ಪು ಛಾಯೆಗಳು ಕಾಣಬರುತ್ತವೆ. ಇವರಿಗೆ ಪ್ರಜಾಪ್ರಭುತ್ವ ಯೋಜನೆಗಳಲ್ಲಿ ನಾವು ಒದಗಿಸತಕ್ಕಂಥ ಹೆಚ್ಚಿನ ಫಲ ದೊರಕುತ್ತಾ ಇಲ್ಲ. ಇವತ್ತು ನಾವು ಅವರಿಗೆ ಬೆಂಬಲವನ್ನು ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ರಾಜ್ಯದ ನಕ್ಷೆಯಲ್ಲಿ ಭೂಗೋಳಿಕವಾಗಿ ಈ ಕಪ್ಪು ಛಾಯೆಗಳು ಇದೆ, ಹಿಂದುಳಿದ ಜಿಲ್ಲೆಗಳು ಇವೆ, ಹಿಂದುಳಿದ ತಾಲ್ಲೂಕುಗಳು ಇವೆ, ಹಿಂದುಳಿದ ಹಳ್ಳಿಗಳು ಇವೆ, ಇಡೀ ದೇಶದ ನಕ್ಷೆಯನ್ನು ನೋಡಿದಾಗ ಹಿಂದುಳಿದ ರಾಜ್ಯಗಳೂ ಇವೆ. ಆದ್ದರಿಂದ ಈ ರಾಜ್ಯದಲ್ಲಿ ಒಂದು ಆರ್ಥಿಕ ಸಮೀಕ್ಷೆಯನ್ನು ಮಾಡಿದಾಗ ಕೂಡ ಕೆಲವು ಪ್ರದೇಶಗಳು ಹಿಂದುಳಿದಿವೆ, ಕೆಲವು ತಾಲ್ಲೂಕುಗಳು ಹಿಂದುಳಿದಿದೆ, ಹಳ್ಳಿಗಳೂ ಹಿಂದುಳಿದಿದೆ. ಅವುಗಳನ್ನು ನಮ್ಮ ಜೊತೆಯಲ್ಲೇ ಕೊಂಡು ಹೋಗುವಂಥ ಒಂದು ಶಾಸ್ತ್ರೀಯವಾದ, ಒಂದು ಕ್ರಮಬದ್ಧವಾದ ಕಾರ್ಯಕ್ರಮ ನಮ್ಮ ಕರ್ನಾಟಕ ರಾಜ್ಯದಲ್ಲಿ ಆದಾಗ ಮಾತ್ರ ನಮ್ಮ ಆರ್ಥಿಕ ರಥ ಚೆನ್ನಾಗಿ

ಹೋಗುತ್ತದೆ. ಕೆಲವುಸಾರಿ ರಥ ಹೋಗುವಾಗ ಅಲ್ಲಲ್ಲಿ ಒತ್ತಿನ ಪ್ರಕಾರಗಳು ಇರುತ್ತದೆ, ಒಂದು ಕಲ್ಲು ಇದ್ದರೂ ಅದು ತಡೆಯುತ್ತದೆ, ಅದೆಲ್ಲಾ ಸಮತಟ್ಟಾಗಿ ಇರಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ಆ ಅನುಭವ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮಗೆ ಅನುಭವ ಇಲ್ಲ. ಆರ್ಥಿಕ ರಥ ಹೋಗುವಾಗ ಒತ್ತಿರ ಪ್ರಕಾರಗಳಲ್ಲಿ ಕಲ್ಲಿನ ತಡೆಯೂ ಇರುತ್ತದೆ. ನಮ್ಮ ರಾಜ್ಯದ ಆರ್ಥಿಕ ರಥ ಚೆನ್ನಾಗಿ ನಡೆಯ ಬೇಕುಎಂಬ ಆಸೆ ನಮ್ಮದು ಆದ್ದರಿಂದ ಆ ತಡೆಯನ್ನು ಸರಿಮಾಡಿಕೊಂಡು ನಾವು ಆ ರಥವನ್ನು ಎಳೆಯುತ್ತೇವೆ. ಈ ಆರ್ಥಿಕ ರಥವನ್ನು ಎಳೆಯತಕ್ಕಂಥ ಕಾಲದಲ್ಲಿ ಪರಿಸರ ಯಾವ ಪ್ರಕಾರ ಇದೆ, ಆ ಪರಿಸರವನ್ನು ಸರಿ ಮಾಡಿಕೊಂಡು ಎಳದುಕೊಂಡು ಹೋದಾಗ ಮಾತ್ರ ರಾಜ್ಯದ ಆರ್ಥಿಕ ರಥ ಸಮರ್ಪಕವಾಗಿ ಹೋಗುತ್ತದೆಂದು ಹೇಳಬಹುದು. ಇಲ್ಲದಿದ್ದರೆ ಅದು ಸಮರ್ಪಕವಾಗಿ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಜಿ. ಕೊಡಗಿ.—ಈಗ ನೀವು ತಗ್ಗು ಇರುವಂಥ ಕಡೆಯಲ್ಲಿ ರಥವನ್ನು ಎಳೆಯುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಹೇಳಿದ್ದು ಸರಿ, ಅನೇಕ ಕಡೆ ತಗ್ಗು ಇದೆಯೆಂದು ಸರ್ಕಾರಕ್ಕೆ ಕಂಡು ಬಂದಿದ್ದರಿಂದ ನಾವು ಅದನ್ನು ಸರಿ ಮಾಡಿದ್ದೇವೆ. ಅದನ್ನು ಸರಿ ಮಾಡಿ ಮುಂದೆ ಹೋಗುತ್ತಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ರಥದ ಗಾಲಿಗಳು ಸರಿಯಾಗಿ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕೆಲವು ಸಾರಿ ಒಳ್ಳೆಯ ಗಾಲಿ ಇದ್ದರು ಕೂಡ ದೊಡ್ಡ ಹೊಂಡ ಅಡ್ಡಬಂದರೆ ತಡೆ ಉಂಟಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ವಿಶೇಷವಾಗಿ ನಾವು ಮನಸ್ಸನ್ನು ಕೊಟ್ಟು ಇದಕ್ಕೆ ಈ ಯೋಜನೆಗಳಲ್ಲಿ ಹಣವನ್ನು ಒದಗಿಸಿದ್ದೇವೆ. ಅದರ ಪ್ರಕಾರ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಅನೇಕ ಸಮಯದಿಂದ ಈ ವಿಚಾರದಲ್ಲಿ ಬೇಡಿಕೆ ಇದೆ. ಎಲ್ಲಾ ಶಾಸಕರು ಕೂಡ ನಮ್ಮ ಕಡೆ ಅಸಮತೋಲನ ಇದೆ. ಎಲ್ಲಾ ದೃಷ್ಟಿಯಿಂದಲೂ ಕೂಡ ವ್ಯಾಪಕವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ನಮ್ಮನ್ನು ಕಡೆಗಣಿಸುತ್ತಿದ್ದೀರಿ ಎಂದು ಹೇಳಿದ್ದಾರೆ. ಮಾನ್ಯ ಭೀಮಣ್ಣಖಂಡ್ರೆ ಯವರು ಇಲ್ಲೇ ಇದ್ದಾರೆ. ಅವರು ಗ್ರೇಟ್ ಎಕ್ಸ್‌ಪೋನೆಂಟ್ ಆಗಿದ್ದಾರೆ.

ಶ್ರೀ ಎ. ಲಕ್ಷ್ಮಿಸಾಗರ್.—ಸ್ವಾಮಿ, ಮಾನ್ಯ ಅರ್ಥಮಂತ್ರಿಯವರು ಇಷ್ಟೊಂದು ರಸವತ್ತಾಗಿ ಅರ್ಥವತ್ತಾಗಿ ಈ ಸಭೆಗೆ ಈ ಯೋಜನೆಗಳ ಬಗ್ಗೆ ವಿಚಾರವನ್ನು ತಿಳಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರ ಪಾರ್ಟಿಯ ಮಾನ್ಯ ಮಂತ್ರಿಗಳು, ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿ ಇಲ್ಲ. ಈ ವಿಚಾರದಲ್ಲಿ ಅವರ ಗುರಿಯನ್ನು ಸೇರುವುದಕ್ಕೆ ಅವರಿಗೆ ಎಷ್ಟು ಆಸಕ್ತಿ ಇದೆ ಎಂಬುದು ನಮಗೆ ಗೊತ್ತಾಗುತ್ತಾ ಇದೆ.

ಅಧ್ಯಕ್ಷರು.—ಅವರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾವು ಈ ರಾಜ್ಯದಲ್ಲಿ ಈ ಆರ್ಥಿಕ ಯೋಜನೆಗಳ ಪ್ರಯೋಗವನ್ನು ಒಂದೇ ಸಮನೆ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಸಾರಿ ಈ ದಿಶೆಯಲ್ಲಿ ಅನೇಕ ತಡೆಗಳು ಬರುತ್ತವೆ, ಅಲ್ಲದೆ ಪ್ರಾದೇಶಿಕ ಅಸಮತೋಲನ ಇದೆ, ಇದನ್ನೆಲ್ಲಾ ಸರಿಮಾಡಬೇಕು ಹೈದರಾಬಾದ್ ಕರ್ನಾಟಕ ಏರಿಯಾದವರು, ಗುಲ್ಬರ್ಗ, ರಾಯಚೂರು, ಬೀದರ್, ಈ ಪ್ರದೇಶದ ಜನರಾಗಲಿ ಶಾಸಕರಾಗಲೀ, ಎಲ್ಲಾ ಪಕ್ಷದ ಶಾಸಕರಾಗಲೀ, ಎಲ್ಲಾ ವರ್ಗದ ಜನರಾಗಲೀ ಇಲ್ಲಿ ಅಸಮತೋಲನ ಇದೆ, ಆದ್ದರಿಂದ ಈ ಯೋಜನೆಗಳಲ್ಲಿ ವಿಶೇಷವಾಗಿ ಆರ್ಥಿಕ ಪ್ರಯೋಗಗಳನ್ನು ನೀವು ಮಾಡಬೇಕು ಎಂದು ಅನೇಕ ಸಮಯದಿಂದ ಹೇಳುತ್ತಿದ್ದಾರೆ.

† SRI C. M. ARUMUGHAM.—It is good that you are making a good speech with all relevant points. My submission is that the reply on the general discussion of the budget is something like the policies and programmes of the Government. therefore. when the Finance Minister replies on behalf of the Government, it is necessary that all the Cabinet Ministers and Senior Officers must be present. He is

replying to various points, not only pertaining to Finance Depart ment, but also to other departments. Therefore, the Ministers must be present to note down the policies and programmes initiated by the Government. The senior officers must also be present to jot down points pertaining to their departments. When he is speaking on behalf of the Government, is it not the duty of the Cabinet Ministers and the Senior Officers to be present ? I think, Sir, you must give proper direction to the Ministers to be present here.

MR SPEAKER.—General discussion has trken place on the floor of this House, Now the Finance Minister is replying.

SRI C. M. ARUMUGHAM.—What I am submitting is that the Ministers must be present here because the Finance Minister is speaking on the points pertaining to all the departments.

MR SPEAKER,—He says that he will reply when the demands are taken up. The Members have spoken on almost all the demands. So he has to reply.

SRI C. M. ARUMUGHAM.—Sir, he is competent to reply. I am not finding fault with him. But when he replies, it is necessary that the Cabinet Ministers must be present to note down the points and take follow-up action concerning their departments.

MR. SPEAKER.—He is the Finance Minister pertaining to all the departments and Ministries,

SRI K. H. SRINIVAS.—Sir, we have raised this matter with due respect to the Hon'ble Finance Minister himself, You yourself have been a seasoned legislator There are occasions when members could take their own leisure, But there are very important occasions and replying to the general discussion on the Budget by the Finance Minister is one of the very important occasions which should not be taken so lightly by the Treasury Benches and the Ruling party. After all it is a gross insult to the Hon'ble Finance Minister himself, and we are sorry we have the misfortune to champion this cause. We are only mentioning that we are helpless. I know, you are also helpless in the matter. But we extend our sympathies to the Hon'ble Finance Minister.

ಶ್ರೀ ಎಂ, ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಅವಮಾನ ಮಾಡಬೇಕು ಅಥವಾ ಈ ಸದನವನ್ನು ನಿರ್ಲಕ್ಷಿಸಬೇಕು ಎನ್ನತಕ್ಕಂಥ ಯಾವುದೇ ಉದ್ದೇಶ ಅವರಿಗಿಲ್ಲ ಈಗ ಏನಾಗಿದೆ ಎಂದರೆ ಈಗ ವಿಧಾನಪರಿಷತ್ತು ನಡೆಯುತ್ತಾ ಇದೆ. ಅಲ್ಲಿ ಅನೇಕ ಮಂದಿ ಮಾನ್ಯ ಮಂತ್ರಿಗಳು ಇದ್ದಾರೆ. ಮಾನ್ಯ ಜಕನೂರ್‌ರವರು ಯಾವುದೋ ಸಮಾರಂಭಕ್ಕೆ ಹೋಗಿದ್ದಾರೆ. ಉಳಿದ ಮಂತ್ರಿಗಳಿಗೆ ಇಲ್ಲಿ ಇರುವಂತೆ ನಾವು ಹೇಳುತ್ತೇವೆ. ನಾವು ಕ್ಯಾಬಿನೆಟ್ ಮಿನಿಸ್ಟರ್ಸ್ ಇಲ್ಲಿದ್ದೇವೆ.

ಶ್ರೀ ಕೆ. ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಯವರು ರಾಜ್ಯದ ಆರ್ಥಿಕ ವರ್ಚಸ್ಸಿನ ಬಗ್ಗೆ ಹೇಳುತ್ತಿದ್ದಾರೆ. ಇಂತಹ ಸಮಯದಲ್ಲಿ ಎಲ್ಲಾ ಮಂತ್ರಿಗಳೂ ಇಲ್ಲಿ ಹಾಜರಿರಬೇಕು.

ಅವರು ಇಲ್ಲಿ ಇಲ್ಲದಿದ್ದರೆ, ಅವರನ್ನೆಲ್ಲಾ ಪುನಃ ಇಲ್ಲಿ ಸೇರಿಸಿ ಪಾಠ ಹೇಳಬೇಕಾಗುತ್ತದೆ, ಆದ್ದರಿಂದ we have taken sympathy for this.

ಶ್ರೀ ಜೆ. ಎಚ್. ಪಟೇಲ್ .— ನಾನು ಉತ್ತರ ಹೇಳಿದರೆ ಯಾರಿಗೂ ಅರ್ಥವಾಗುವುದಿಲ್ಲ. ಅದಕ್ಕೋಸ್ಕರ ಬಂದಿಲ್ಲ ಎಂದು ಹೇಳಲಾರದೆ ಏನೋ ಹೇಳುತ್ತಿದ್ದಾರೆ, ಯಾರಿಗೂ ಅರ್ಥವಾಗುವುದಿಲ್ಲ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ .— ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿದ್ದೆ. ಅಸಮತೋಲನವನ್ನು ಸರಿಪಡಿಸುವ ಬಗ್ಗೆ ಹೈದರಾಬಾದ್ ಕರ್ನಾಟಕ ಪ್ರದೇಶದವರ ಬೇಡಿಕೆ ಇದೆ ಎಂದು ಅದಕ್ಕೋಸ್ಕರ ಮಾನ್ಯ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ಶಾಸಕರನ್ನು ಹೊಂದಿಕೊಂಡಂಥ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯ ವರದಿ ಬಂದಮೇಲೆ ಯಾವ ರೀತಿಯ ಕಾರ್ಯಕ್ರಮಗಳನ್ನು ಅಲ್ಲಿ ರೂಪಿಸಬೇಕು. ಅಲ್ಲಿ ಪ್ರತ್ಯೇಕವಾದಂಥ ನಿಗಮವನ್ನು ರಚನೆ ಮಾಡಬೇಕೇ ಬೇಡವೇ, ಯಾವ ರೂಪದ ಯೋಜನೆಗಳನ್ನು ಆ ಪ್ರದೇಶದಲ್ಲಿ ತೆಗೆದುಕೊಳ್ಳಬಹುದು ಎಂದು ಆಲೋಚನೆ ಮಾಡುತ್ತಿದ್ದೇವೆ. ಇದು ಇಷ್ಟಕ್ಕೆ ಸೀಮಿತವಾಗಿಲ್ಲ. ಏಕೆಂದರೆ, ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತಾ ಮಲೆನಾಡಿನ ಅಭಿವೃದ್ಧಿ ಬಗ್ಗೆ ಹೇಳಿದರು. ಪ್ರಾದೇಶಿಕ ಅಸಮತೋಲನ ಇದ್ದ ಕಡೆ ವಿಶೇಷವಾದಂಥ ಯೋಜನೆಗಳನ್ನು ಹಾಕಿ ಆ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸುವಂಥ ಕಾರ್ಯಕ್ರಮಗಳನ್ನೂ ಕೂಡ ರಾಜ್ಯದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಹಾಕಲೇ ಬೇಕಾಗುತ್ತದೆ. ಮಾನ್ಯ ಸದಸ್ಯರಾದ ತಿಮ್ಮಪ್ಪ ಹೆಗ್ಗಡೆಯವರು ಮಾತನಾಡುತ್ತಾ ಮಲೆನಾಡು ಬೋರ್ಡ್ ಆಗಬೇಕು ಎಂದು ಬಹಳ ಸಮಯದಿಂದ ಕೇಳುತ್ತಾ ಇದ್ದೇವೆ. ಅದನ್ನು ಮಾಡುತ್ತಾ ಇಲ್ಲ ಎಂದು ಹೇಳಿ ಮಾಡಬೇಕು ಎನ್ನತಕ್ಕಂಥ ತೀವ್ರವಾಂಥ ಬೇಡಿಕೆಯನ್ನೂ ಕೂಡ ಸರ್ಕಾರದ ಮುಂದಿಟ್ಟಿದ್ದಾರೆ. ಅದು ಮಾಡಿದ ಮೇಲೆ ನಮ್ಮಲ್ಲೂ ನಿಗಮ ಮಾಡಿ ಎಂದು ಮತ್ತೆ ಕೆಲವರು ಹೇಳುತ್ತಾರೆ. ಅಭಿವೃದ್ಧಿಯ ದೃಷ್ಟಿಯಲ್ಲಿ ಸರ್ಕಾರ ಮುಕ್ತ ಹೃದಯದಿಂದ ಇದ್ದು, ಯೋಜನೆಗಳ ಮುಖಾಂತರ, ನಿಗಮದ ಮುಖಾಂತರ ಆ ಪ್ರದೇಶದ ಅಭಿವೃದ್ಧಿ ಆಗುವುದಿದ್ದರೆ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾವು ಆಲೋಚನೆ ಮಾಡುತ್ತಿದ್ದೇವೆ, ಅದು ಕೇವಲ ಬೋರ್ಡ್ ಅಥವಾ ನಿಗಮವನ್ನು ಸ್ಥಾಪನೆಮಾಡಿ ಆಗಬೇಕು ಎಂದು ಏನೂ ಇಲ್ಲ. ಬೇರೆ ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದು ಕೊಂಡು ಆ ಮೂಲಕ ಆ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸಬೇಕು ಎಂದು ಈ ಬಾರಿ ಸರ್ಕಾರ ವಿಶೇಷವಾದ ಪ್ರಜ್ಞೆಯನ್ನು ಇಟ್ಟುಕೊಂಡು ನೀತಿಯ ಮುಖಾಂತರ ಮಾಡುತ್ತಿದೆ. ಕೆಲವು ಅಭಿವೃದ್ಧಿಯಲ್ಲಿ ಬರುತ್ತದೆ. ಅದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಕೊಡುವ ರೀತಿಯಲ್ಲಿ ಈ ಬಾರಿ ಯೋಜನೆಯನ್ನು ಹಾಕುತ್ತಾ ಇದ್ದೇವೆ. ಈ ವರ್ಷದ ಸಾಲಿನಲ್ಲಿ ನಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ಉದಾಹರಣೆಗೆ ವೆಟರ್ನರಿ ಸರ್ವೀಸಸ್ ಮಾಡಬೇಕು, ನಾವು ಆಸ್ಪತ್ರೆಯನ್ನು ಮಾಡಬೇಕು ಎಂದು ಇದ್ದರೆ ಅದಕ್ಕೆ ಕಟ್ಟಡಬೇಕಾಗುತ್ತದೆ ಕಟ್ಟಡ ತಯಾರು ಮಾಡುವುದಕ್ಕೆ ಇನ್ನೊಂದು ವರ್ಷ ಬೇಕಾಗುತ್ತದೆ. ಏಕೆಂದರೆ, ಹಣದ ಕೊರತೆ ಇರುತ್ತದೆ. ಪಶುಸಂಗೋಪನಾ ವಿಚಾರದಲ್ಲಿ ಹೇಳುವುದಾದರೆ, between one rural veterinary dispensary and another rural veterinary dispensary ನಾವು ಮೊಬೈಲ್ ಡಿಸ್ಪೆನ್ಸರಿಯಾದರೂ ಮಾಡಿ ಈ ಕೊರತೆಯನ್ನು ನಿವಾರಿಸಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ .— ಮರದ ಕೆಳಗೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ .— ಮರದ ಕೆಳಗೆ ಮಾಡೋಣ, Afterall, services are important and not the Building. Those days of keeping conservative ideas have gone. ಈ ಸ್ಕೀಮು ಇದೇ ರೀತಿಯಲ್ಲಿ A to Z ಆಗಬೇಕು ಎನ್ನುವುದು ಮುಖ್ಯವಲ್ಲ, ಸರ್ವೀಸಸ್ ಕೊಡುವುದು ಮುಖ್ಯ. ಮರದ ಕೆಳಗೆ ಸೇವೆಯನ್ನು ಕೊಡಬಹುದು. Veterinary services can be rendered even under the tree, provided the services of a veterinary doctor or a Compounder or the necessary instruments and drugs are available. ಕಳೆದ ಸಾರಿ ಅನೇಕ ಯೋಜನೆಗಳನ್ನು ಮಾಡುತ್ತೇವೆಂದು ಹೇಳಿ, ಇಷ್ಟು ಯೋಜನೆಗಳಿಗೆ ಕಟ್ಟಡ ಆಗಬೇಕು, ಅದಕ್ಕೆ ಇಂತಿಷ್ಟು ಸ್ಟಾಫ್ ಆಗಬೇಕು ಎಂದು ಅದಕ್ಕೆ ಹೆಚ್ಚು ಹಣ ವಿನಿಯೋಗ ಮಾಡಿಕೊಂಡು ನಮ್ಮ ಯೋಜನೆಗಳ ಬಗ್ಗೆ ಕಡಿಮೆ

ಖರ್ಚು ಮಾಡುತ್ತಾ ಇದ್ದೇವೆ. The content of development is important and not how you can do it *i. e*, instruments may not be necessary. Cutting down the non-development expenditure is important. ಬಡತನ ದಿಂದ, ದಾರಿದ್ರ್ಯದಿಂದ ನರಳತಕ್ಕ ದೇಶದಲ್ಲಿ ಸಾಮುದಾಯಿಕ ಬದಲಾವಣೆಗಳಿಗೆ ಹೆಚ್ಚು ಒತ್ತನ್ನು ಕೊಟ್ಟು, ದೇಶದ ಬೆಳವಣಿಗೆಗೆ ಕಡಿಮೆ ಒತ್ತನ್ನು ಕೊಡುವಂಥ ಒಂದು ಸಂಪ್ರದಾಯ ಏನು ನಮ್ಮ ದೇಶದಲ್ಲಿದೆ, ಅದನ್ನು ಮುರಿಯಬೇಕು. We must give more importance to the development content of each scheme, each programme and each plan. ಇದು ನಮ್ಮ ವಿಶೇಷವಾದಂಥ ಕಾರ್ಯನೀತಿಯ ವೈಖರಿ. ರಸ್ತೆಗಳನ್ನು ಕೊಡುವಂಥಾದ್ದು, ಜ್ಞಾನ ಮಂದಿರಗಳನ್ನು ಪ್ರಾರಂಭಮಾಡುವಂಥಾದ್ದು ಮುಂತಾದ ಕೆಲಸಗಳಿವೆ. ತಮಗೆ ಗೊತ್ತಿದೆ, ಸರ್ ಎಂ. ವಿಶ್ವೇಶ್ವರಯ್ಯನವರ ಆತ್ಮ ಚರಿತ್ರೆಯನ್ನು ಓದಿದವರಿಗೆ ಗೊತ್ತಾಗುತ್ತದೆ, ಅವರು ಸ್ಟ್ರೀಟ್ ಲೈಟ್ ಕೆಳಗೆ ಓದಿ ಕಲಿತು ಇಡೀ ವಿಶ್ವದ ಶ್ರೇಷ್ಠ ಇಂಜನಿಯರ್ ಆಗಿದ್ದರು. ನಾವು ಹಳ್ಳಿಗಳಲ್ಲಿ ಶಾಲೆಗಳನ್ನು ಕಟ್ಟುತ್ತಾ ಇದ್ದೇವೆ. ಸ್ಕಾಲರ್‌ಶಿಪ್ ಕೊಡುತ್ತಾ ಇದ್ದೇವೆ, ಎಂದು ಇನ್ನೂ ಅನೇಕ ರೀತಿಯಾಗಿ ಹೇಳುತ್ತಿದ್ದೇವೆ. ಆದರೆ ನಿಜವಾಗಿಯೂ ಮಕ್ಕಳಿಗೆ ಅನೇಕ ತೊಂದರೆಗಳಿರುತ್ತವೆ. ಮಕ್ಕಳಿಗೆ ಶಾಲೆ ಗಳಿಗೆ ಬರಲಿಕ್ಕೆ ಕಷ್ಟವಾಗುತ್ತದೆ. Parents cannot afford to send them. These are the days we should think of even giving parental scholarship. ಪೇರೆಂಟ್ಸ್‌ಗೆ ಸ್ಕಾಲರ್‌ಶಿಪ್ ಕೊಡುವಂಥ ನಾವು ಚಿಂತನೆ ಮಾಡಬೇಕಾಗುತ್ತದೆ. They cannot go to the school. They cannot afford to go to theschool. ನಾವು ದುರ್ಬಲವರ್ಗದವ ರನ್ನು ಉದ್ಧಾರ ಮಾಡುವುದಕ್ಕೆ ಹೊರಟಾಗ ಶಾಲೆಗೂ,ದುರ್ಬಲವರ್ಗದವರ ಮನೆಗೂ,ಭಾರತ ದೇಶಕ್ಕೂ ಮತ್ತು ಅಮೇರಿಕಾ ದೇಶಕ್ಕೂ ಇರತಕ್ಕ ಅಂತರ ಇದೆ. It is so far, that they cannot reach it. They cannot struggle for it. Even if they come, they crumble. ಮಾನ್ಯ ಸದಸ್ಯರು ದುರ್ಬಲವರ್ಗದವರ ದಾರುಣ ಪರಿಸ್ಥಿತಿಯನ್ನು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ೧೪ವರ್ಷದ ಹೆಣ್ಣುಮಕ್ಕಳು ಮುದುಕಿಯ ಹಾಗೆ ಕಾಣುತ್ತಾ ಇದ್ದಾಳೆ ಎಂದು ಹೇಳಿದ್ದಾರೆ. ನನಗೂ ಆ ಒಂದು ಅನುಭವ ಇದೆ. ನಾನು ಅಡ್ವೋಕೇಟ್ ಇರುವಾಗ, ಇಂಥ ಪರಿಸ್ಥಿತಿಯನ್ನು ಕಂಡಿದ್ದೇನೆ. ಈ ಒಂದು ಪರಿಸ್ಥಿತಿ ಇದೆ, ಇಲ್ಲ ಎಂದು ಹೇಳುವುದಿಲ್ಲ. ಮಾನಸಿಕವಾಗಿ ಮತ್ತು ಆರ್ಥಿಕ ಪರಿಸ್ಥಿತಿಯಿಂದಾಗಿ ಜನಗಳಿಗೆ ಒತ್ತಡ ಬಂದಿದೆ. ಅವರು ತಡವರಿಸಲಾಗದೆ, ಮುಂದುವರಿಯಲಾಗದೆ, ನಾವು ಯಾವತ್ತೂ ಕೊಟ್ಟಂಥ ಸವಲತ್ತನ್ನು ತೆಗೆದುಕೊಳ್ಳಲಾರದಂಥ ಪರಿಸ್ಥಿತಿಯಲ್ಲಿ ಇದ್ದಾರೆ. ಈ ಜ್ಞಾನ ಮಂದಿರಗಳನ್ನು ಸ್ಥಾಪನೆ ಮಾಡುವಂಥ ಪ್ರಾಥಮಿಕ ಉದ್ದೇಶ ಏನೆಂದರೆ, ಹಳ್ಳಿಗಳಲ್ಲಿ ಹರಿಜನ-ಗಿರಿಜನರು ಇರತಕ್ಕ ಯಾವ ಪ್ರದೇಶವಿದೆ. ಆ ಪ್ರದೇಶದಲ್ಲಿ ಕೋಣೆಯನ್ನು ಸೃಷ್ಟಿಮಾಡಿ,ಅದಕ್ಕೆ ವಿದ್ಯುತ್ ಬಲ್ಬನ್ನು ಕೊಡುವಂಥಾದ್ದು. ಅಲ್ಲಿ ಪಠ್ಯ ಪುಸ್ತಕಗಳಿರುವುದಿಲ್ಲ. ಜನತಾ ಮನೆಗಳು ಏನು ಮಾಡು ತ್ತಿದ್ದೇವೆ. ಆ ಒಂದು ಕೋಣೆಯಲ್ಲಿ ಆ ಮಕ್ಕಳು ಓದಲಿಕ್ಕೆ ಆಗುವುದಿಲ್ಲ ಮನೆಯ ತಾಪತ್ರಯ ಜಾಸ್ತಿ ಇರುತ್ತದೆ. ಇದರಿಂದ ಹಸುಳೆಗಳು ಸ್ವಚ್ಛವಾಗಿ ಒಂದು ಕಡೆ ಕುಳಿತು ವಿದ್ಯಾರ್ಜನೆ ಮಾಡುವು ದಕ್ಕೆ ಅವಕಾಶವಿರುವುದಿಲ್ಲ. ಆ ಸಣ್ಣ ಮುಗ್ಧ ಯುವಕರು ಆ ಒಂದು ಹಂತದಲ್ಲಿ ವಿಕಾಸವಾಗದಿದ್ದರೆ,ನಿಜ ವಾಗಿಯೂ ಅವರು ಆಫೀಸರ್ ಆಗಬೇಕು. ಅಧಿಕಾರಿಗಳಾಗಬೇಕು ಎಂದರೆ ಅದು ಖಂಡಿತವಾಗಿಯೂ ಸಾಧ್ಯವಿಲ್ಲ,

೩-೩೦ ಪಿ. ಎಂ.

ಸ್ಟೈಫಂಡರಿ ಸ್ಕೀಂನಲ್ಲಿ ಸಾಕಷ್ಟು ಕಾರ್ಯಕ್ರಮವಿದೆ. ಇದರಲ್ಲಿ ಟೀಚರ್ಸ್‌ನ್ನು ನೇಮಕ ಮಾಡತಕ್ಕ ಕಾರ್ಯಕ್ರಮಗಳೂ ಇವೆ. ಮತ್ತೆ ಸ್ಫೋಟಕವಾಗಿರತಕ್ಕ ಜನರ ಮನಸ್ಸನ್ನು ಶಾಂತಿಗೊಳಿಸಲು ಮತ್ತು ಅವರವರ ಕ್ಷೇತ್ರದಲ್ಲಿ ಅವರವರು ಮುಂದುವರಿದು ಬರುವಂತೆ ಮಾಡಲು ಅವರಿಗೆ ಹೆಚ್ಚಿನ ಜ್ಞಾನವನ್ನು ವೃದ್ಧಿಸುವ ಸಲುವಾಗಿ ಜ್ಞಾನ ಮಂದಿರಗಳನ್ನು ತೆರೆಯುವ ಯೋಜನೆಗಳನ್ನೂ ಸಹ ಹಾಕಿಕೊಂಡಿದ್ದೇವೆ. ಮತ್ತೆ ಶಾಲಾ ಕಾಲೇಜಗಳಿಂದ ಹೊರಗೆಬಂದ ಕೂಡಲೇಅವರುನಿರುದ್ಯೋಗಿಗಳಾಗಿ,ಕೆಲಸಸಿಗದಿದ್ದರೆ ನಿರಾಶ ವಾದಿಗಳಾಗದ ಹಾಗೆ ಮಾಡಲು ಈ ಸ್ಟೈಫಂಡರಿ ಯೋಜನೆಗಳನ್ನು ಹಾಕಿ,ಅದರಿಂದ ದೇಶದ ಉತ್ಪನ್ನ ವನ್ನು ಹೆಚ್ಚಿಸುವ ಕಡೆಗೆ ಕೊಂಡೊಯ್ಯಬೇಕೆಂದು ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಆಲೋಚನೆ ಮಾಡಿದ್ದೇವೆ.

ಶ್ರೀ ಬಿ. ಮೈಕೆಲ್ ಫರ್ನಾಂಡೀಸ್ .— ಸ್ವಾಮಿ ಇದು ಕಳೆದ ವರ್ಷ ವಿರೋಧ ಪಕ್ಷದವರ ಕಡೆಯಿಂದ ಬಂದಂಥ ಸಲಹೆ ಅದನ್ನು ನೀವು ಈ ವರ್ಷ ಇಂಪ್ಲಿಮೆಂಟ್ ಮಾಡುತ್ತಿದ್ದೀರಿ.

SRI M. VEERAPPA MOILY.—Because it is our policy to implement the scheme, we have given effect to it. This stipendary scheme is linked with permanent employment programme. ಅಧ್ಯಕ್ಷರೇ. ಈ self employment programme ಏನಿದೆ ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಉದ್ಯೋಗವನ್ನು ಒದಗಿಸಬೇಕೆಂದು ಹೇಳಿ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ೪ ರೂಪಾಯಿ ಎಂದಿದ್ದುದನ್ನು ೫ ರೂಪಾಯಿಗಳು ಎಂದು wages ನಿಗದಿ ಮಾಡಿದ್ದೇವೆ. ೧೦೦ ದಿವಸ ವರ್ಷದಲ್ಲಿ ಅವರಿಗೆ ಕೆಲಸವಿರುವುದಿಲ್ಲ. ಆದುದರಿಂದ ಅವರಿಗೆ ಆ ಸಂದರ್ಭದಲ್ಲಿ ಕೆಲಸವನ್ನು ಒದಗಿಸಿಕೊಡಬೇಕೆಂದು ಹೇಳಿ ನಾವು ಈ ಸಾರಿ ೫೦ ಹೊಸ ತಾಲ್ಲೂಕ್‌ಗಳಲ್ಲಿ ಈ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಇದರಲ್ಲಿ ಕೆಲವು ಕಡೆ ಹಣದ ದುರುಪಯೋಗವಾಗಿದೆ ಎನ್ನುವ ಅಂಶ ನಮ್ಮ ಗಮನಕ್ಕೆ ಬಂದಿದೆ. ಮೊನ್ನೆ ತಾನೆ ತುಮಕೂರಿನ ಕೊರಟಗೆರೆ ತಾಲ್ಲೂಕಿನಲ್ಲಿ ಈ ರೀತಿಯಾಗಿ ಹಣದ ದುರುಪಯೋಗವಾಗಿದೆಂದು ತಿಳಿದು ಬಂದಿದೆ. ಈಗಾಗಲೇ ಅಲ್ಲಿರತಕ್ಕ ಬಿ.ಡಿ.ಓ. ಮತ್ತು ಒಬ್ಬ ಜೂನಿಯರ್ ಇಂಜಿನಿಯರ್‌ರವರನ್ನು ಸಸ್ಪೆಂಡ್‌ಮಾಡಿ ಆ ಮೂಲಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಮ್ಮ ಈ ಕಾರ್ಯಕ್ರಮವೇನಿದೆ ಇದು ಬಹಳ ಪ್ರಾಮುಖ್ಯವಾದ ಕಾರ್ಯಕ್ರಮವಾಗಿದೆ. ಇದರ ಪ್ರಕಾರ ನಾವು ಈ ವರ್ಷ ಸುಮಾರು ೬–೭ ಲಕ್ಷ ಭೂರಹಿತ ಕಾರ್ಮಿಕರಿಗೆ ದುರ್ಬಲವರ್ಗದವರಿಗೆ, ಉದ್ಯೋಗವನ್ನು ಒದಗಿಸಿ ಕೊಡುವಂಥಾ ಕಾರ್ಯಕ್ರಮವನ್ನು ಹಾಕಿಕೊಂಡು, ಇದರಿಂದ ಸುಮಾರು ೨ ಲಕ್ಷ ಮ್ಯಾನ್‌ಡೇಸ್ ಒದಗಿಸಿದ್ದೇವೆ. ಅನೇಕ ಕಡೆ ಉತ್ತಮವಾದ ಕೆಲಸಗಳು ಆಗಿವೆ. ಉದಾಹರಣೆಗೆ ನಮ್ಮ ಆನೇಕಲ್ ತಾಲ್ಲೂಕಿನ ಕ್ಷೇತ್ರದಲ್ಲೂ ಕೂಡ ಅನೇಕ ಸ್ಕೂಲ್ ಕಟ್ಟಡಗಳು ಆಗಿವೆ. ಮತ್ತೆ ಕೆಲವು ಕಡೆ ನೂರಾರು ಸ್ಕೂಲ್ ರೂಂಗಳ ಕೊರತೆ ಏನಿತ್ತು ಅದನ್ನು ನೀಗಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡಿದ್ದೇವೆ. ಇದರಿಂದ ಸಮಾಜಕ್ಕೆ ಉಪಯೋಗವಾಗತಕ್ಕಂಥ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಯಿತು.

ಶ್ರೀ ಎಂ. ಚಂದ್ರಶೇಖರ್ .— ಆನೇಕಲ್‌ನಲ್ಲಿ ಒಳ್ಳೆಯ ಕೆಲಸ ಆಗಿದೆಯೆಂದು ಮಾನ್ಯ ಸಚಿವರು ಹೇಳಿದರು. ಆನೇಕಲ್‌ನಲ್ಲಿರುವ ಬಿ.ಡಿ.ಓ. ಮತ್ತು ಜೂನಿಯರ್ ಇಂಜನಿಯರ್‌ರವರು ಏನು ಅವ್ಯವಹಾರ ನಡೆಸಿದ್ದಾರೆ. ಅದರ ಬಗ್ಗೆ ಈಗಾಗಲೇ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೇವೆ. ಅಲ್ಲಿ ಲಕ್ಷಾಂತರ ರೂಪಾಯಿಗಳ ಲೂಟಿಯಾಗಿದೆ.

ಶ್ರೀ ವೈ. ರಾಮಕೃಷ್ಣ.— ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಆಗದೇ ಇರತಕ್ಕಂಥದ್ದು ಏನೂ ಆಗಿಲ್ಲ. ಎಷ್ಟು ಶಾಲಾ ಕಟ್ಟಡಗಳ ಆಗಿವೆ. ಎಷ್ಟು ಪಂಚಾಯಿತ್ ಹಾಲ್‌ಗಳಾಗಿವೆ ಎಂಬುದನ್ನು ಅಲ್ಲಿಗೆ ಬಂದು ನೋಡಿ ಆ ಮೇಲೆ ಹೇಳಿ.

ಶ್ರೀ ಎಂ. ಚಂದ್ರಶೇಖರ್ .— ಸ್ವಾಮಿ, ಅಲ್ಲಿ ನಡೆದಿರುವ ಒಂದು ವ್ಯವಹಾರದ ಬಗ್ಗೆ ಸಿ. ಓ.ಡಿ. ಎನ್‌ಕ್ವೈರಿ ನಡೆಯುತ್ತಿದೆ,

ಅಧ್ಯಕ್ಷರು ,— ಮಾನ್ಯ ಸದಸ್ಯರು ಏನಾದರೂ ಕೇಳಬೇಕಾಗಿದ್ದರೆ, ಮಾನ್ಯ ಸಚಿವರು ಉತ್ತರ ಕೊಟ್ಟಾದ ಮೇಲೆ ಕೇಳಿ ಈ ರೀತಿ ಮಧ್ಯೆ ಮಧ್ಯೆ ಕೇಳುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ .— ಹೇಳುವ ಪ್ರಸಂಗ ಬಂದಾಗ ಹೇಳಬೇಕಾಗುತ್ತದೆ. ಮಾನ್ಯ ಅರ್ಥ ಸಚಿವರು ಅವರ ಭಾಷಣದಲ್ಲಿ ಆನೇಕಲ್‌ನ ಪ್ರಸ್ತಾಪ ಮಾಡಿದರು. ಆ ಆನೇಕಲ್‌ನಲ್ಲಿ ಪ್ರತಿನಿಧಿಸತಕ್ಕ, ಈ ರಾಜ್ಯದ ಸಚಿವ ಸಂಪುಟದಲ್ಲಿರತಕ್ಕವರ ಕ್ಷೇತ್ರದಲ್ಲಿಯೇ ೧೩ ಲಕ್ಷ ರೂಪಾಯಿಗಳ ದುರುಪಯೋಗವಾಗಿದೆ ಎನ್ನತಕ್ಕ ವಿಚಾರವನ್ನು ಸಭೆಯ ಗಮನಕ್ಕೆ ತರುತ್ತಿರುವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. A mis-appropriation of Rs. 13 lakhs has been taken place in a Constituency which is represented by a Cabinet Minister. That is the reason why the hon. Member Sri M. Chandrashekar has raised this issue. That is the very object of it.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ ಈ ರೀತಿಯಾಗಿ ಒಬ್ಬರ ಮೇಲೆ ಪರ್ಸನಲ್ ಆಗಿ ರಿಮಾರ್ಕ್ಸ್ ಮಾಡುವುದು ಸರಿಯೇ ? ತಪ್ಪು ಮಾಡಿದ್ದರೆ ಹೇಳಲಿ, ಆದರೆ ಈ ರೀತಿ ಸುಮ್ಮನೇ ಬೇಸ್‌ಲೆಸ್ ಆಗಿ ಒಬ್ಬರ ಮೇಲೆ ಅಲಿಗೇಷನ್ ಮಾಡುವುದಕ್ಕೆ ಅವಕಾಶವಿದೆಯೇ ? ಆ ವಿಷಯ ಈ ಸಭೆಯ ಮುಂದೆ ಚರ್ಚೆಯಲ್ಲಿ ಇದೆಯೇ ?

SRI H. D. DEVE GOWDA.—The hon. Minister is saying that it is baseless ; alright ; I accept it. if it is baseless, I will apologise. Let the C O.D. report be placed on the table of the House.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ ೧೯೭೯-೮೦ರ ಸಾಲಿನ ಕಾರ್ಯಕ್ರಮದಲ್ಲಿ ೧೩.೫೦ ಕೋಟಿಯನ್ನು ಅಲಾಟ್‌ಮೆಂಟ್ ಮಾಡಿದ್ದರೆ ಈ ವರ್ಷ ನಾವು ೧೯ ಕೋಟಿ ೧೧ ಲಕ್ಷ ರೂಪಾಯಿಗಳನ್ನು ಈ ಕಾರ್ಯಕ್ರಮಕ್ಕಾಗಿ ಒದಗಿಸಿದ್ದೇವೆ. ಅದಕ್ಕೆ ನಾನು ಹೇಳಿದೆ ಕಮ್ಯೂನಿಟಿ ಅಸೆಟ್ಸ್ ಏನಿದೆ ಇದರಿಂದ ಸಾಮಾನ್ಯ ಜನಗಳಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗಿದೆ. ಎಲ್ಲೆಲ್ಲಿ ಹಣದ ದುರುಪಯೋಗ ವಾಗಿದೆ ಅದನ್ನು ಕೂಡ ವಿಚಾರಣೆ ಮಾಡಿಸುತ್ತೇವೆ. ಎಲ್ಲೆಲ್ಲಿ ಇದರ ಬಗ್ಗೆ ದೂರುಗಳ ಬರುತ್ತವೆ ಅದನ್ನು ಕೂಡ ವಿಚಾರಣೆ ಮಾಡಿಸುತ್ತೇವೆ. ಆದರೆ I don't know why the hon. Member is offended ? That inference is unfair. ಅನೇಕ ಕಾರ್ಯಕ್ರಮಗಳು ನಮ್ಮ ಕ್ಷೇತ್ರದಲ್ಲೂ ಆಗುತ್ತದೆ ಆಗ ಅಲ್ಲಿ ಸಹ ಏನಾದರೂ ದೂರುಗಳು ಬಂದರೆ ಅದನ್ನೂ ಸಹ ವಿಚಾರಣೆ ಮಾಡುತ್ತೇವೆ. ಆದರೆ ಅದೇ ರೀತಿ ಶ್ರೀ ದೇವೇಗೌಡರವರ ಕ್ಷೇತ್ರದಲ್ಲಿ ಆಯಿತೆಂದರೆ ಅದಕ್ಕೆ ಅವರು ಸಂಬಂಧಪಟ್ಟಿದ್ದಾರೆಂದು ಹೇಳಿದರೆ ಅದರಲ್ಲಿ ಅರ್ಥವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಿನ್ನೆ ಲೋಕಸಭೆಯ ಚರ್ಚೆಯನ್ನು ಓದಿದೆ ; ಅಲ್ಲಿ ನಿಮ್ಮ ಪಕ್ಷದವರೇ ಆಹಾರ ಯೋಜನೆಗಳನ್ನು ಸ್ಕ್ರ್ಯಾಪ್ ಮಾಡಬೇಕೆಂದು ಹೇಳಿದ್ದಾರೆ.ಏಕೆಂದರೆ ಎಲ್ಲ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ ಎಂದು. ಇಲ್ಲಿ ಆ ಯೋಜನೆಯನ್ನು ಇಂಟ್ರೊಡ್ಯೂಸ್ ಮಾಡಿದವರು ಶ್ರೀಮಾನ್ ಬಸವಲಿಂಗಪ್ಪನವರು.ಇದಕ್ಕಾಗಿ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಿಮ್ಮ ಬಿ.ಡಿ.ಒ. ಗಳು ನೀವು ಹೇಳಿದ ಹಾಗೆ ಕೇಳಿಕೊಂಡು ಇಲ್ಲ.

ಶ್ರೀ ವೈ ರಾಮಕೃಷ್ಣ.—ಯಾರ ಕ್ಷೇತ್ರದಲ್ಲೇ ಆಗಲಿ ಅಧಿಕಾರಿಗಳು ತಪ್ಪು ಮಾಡಿದರೆ ಬೈದು ಸರಿಪಡಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಆ ಕ್ಷೇತ್ರದಲ್ಲಿ ಖರ್ಚಾಗಿದೆ ಎಂದು ಹೇಳುತ್ತಿದ್ದೇನೆಯೇ ವಿನಹ ಮಾನ್ಯ ರಾಮಕೃಷ್ಣರವರು ಹೊಡೆದರು ಎಂದು ಹೇಳಿದೆನೆ ? Why you take it like that so seriously ?

SRI B. B. SAYANAK.—The Ruling party is showing its strength. It is not correct. We are not coming in the way of finance. They are showing their strength. If this is the attitude we will also show our strength.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೆಲವು ಸಾರಿ ದುರ್ಬಲ ವರ್ಗದವರ ಕಾರ್ಯಕ್ರಮಗಳನ್ನು ಜಾರಿ ಮಾಡುವಾಗ ದೂರುಗಳು ಬರುತ್ತವೆ. ಏಕೆಂದರೆ, ದುರ್ಬಲ ವರ್ಗದವರು ಏನಿದ್ದಾರೆ ಅವರ ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ ಅಪವಾದಗಳು ಜಾಸ್ತಿ. ಉದಾಹರಣೆಗೆ ಉದ್ಯೋಗ ದೃಢೀಕರಣ ಯೋಜನೆ ಏನಿದೆ ಇದು ದುರ್ಬಲರ ಆರ್ಥಿಕ ಮಟ್ಟವನ್ನು ಏರಿಸುವಂತಹ ಒಂದು ಪ್ರಾಮುಖ್ಯವಾದ ಕಾರ್ಯಕ್ರಮ. ಇದರಲ್ಲಿ ಸಂಪೂರ್ಣ ನಂಬಿಕೆ ನಮ್ಮ ಸರ್ಕಾರಕ್ಕೆ ಇದೆ. ಆದರೆ ಇದರಲ್ಲಿ ದುರುಪಯೋಗವಾಗುವುದಕ್ಕೆ ಕೂಡ ಅವಕಾಶ ಇದೆ. ಆದುದರಿಂದ, ನಾವು ಆಡಿಟ್ ಸ್ಕ್ವಾಡನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಕೊಟ್ಟು ಅದೇ ರೀತಿ ಪ್ರತಿ ತಾಲ್ಲೂಕಿಗೂ ಅಕೌಂಟ್ಸ್ ಅಧಿಕಾರಗಳನ್ನು ಕೊಟ್ಟು ಈ ಕಾರ್ಯಕ್ರಮವನ್ನು ಬಲಪಡಿಸಬೇಕಾಗಿದೆ. So that there will be checks and balances in the payment and other things. ಕಾರ್ಯಕ್ರಮ ದುರುಪಯೋಗವಾಗಿದೆ ಎಂದು ಹೇಳಿದ ಕೂಡಲೇ ಕಾರ್ಯಕ್ರಮಗಳನ್ನು

ಕೈಬಿಡುವುದು ಅಲ್ಲ. ಯಾವ ರೀತಿಯಲ್ಲಿ ದುರುಪಯೋಗವಾಗಿದೆ ಎಂಬುದನ್ನು ನಾವು ವಿಮರ್ಶೆ ಮಾಡಿ ನೋಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಬೇರೆ ರಾಜಕೀಯ ಬಣ್ಣ ಹಚ್ಚುವುದಕ್ಕೆ ಹೋಗಬೇಡಿ. ಕಾರ್ಯಕ್ರಮವನ್ನು ಕೈಬಿಡಿ ಎಂದು ಏನಾದರೂ ನಾವು ಹೇಳಿದ್ದೇವೆಯೇ ?

SRI M. VEERAPPA MOILY.—Why should you be offended on these things ?

SRI H. D. DEVE GOWDA —Why should you offend ? ಮಂತ್ರಿಗಳ ಕ್ಷೇತ್ರದಲ್ಲಿ ಆಯಿತು ಎಂದು ಹೇಳಿದೆ ಅಷ್ಟೆ.

SRI M. VEERAPPA MOILY.—I am not offending. ಮಾನ್ಯ ದೇವೇಗೌಡರಿಗೆ ಏಕೆ ಈ ರೀತಿಯಲ್ಲಿ ಬೇಸರವಾಗುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಒಂದು ಕಾರ್ಯಕ್ರಮದಲ್ಲಿ ಖರ್ಚು ಮಾಡತಕ್ಕ ಹಣ, ಇದರ ಉಪಯೋಗವನ್ನು ಪಡೆಯುವವರು ಯಾರಿದ್ದಾರೆ. ಅವರಿಗೇ ನೇರವಾಗಿ ತಲುಪಬೇಕೆಂದು ನಮ್ಮ ಉದ್ದೇಶವಾಗಿದೆ ; ಇದರಲ್ಲಿ ಯಾವುದೇ ದುರುಪಯೋಗವಾದರೂ ಕೂಡ ಸರಕಾರ ಸಹಿಸುವುದಿಲ್ಲ. ಆ ಬಗ್ಗೆ ವಿಶೇಷವಾಗಿ ಕ್ರಮ ತೆಗೆದುಕೊಂಡಿದ್ದೇವೆ. ಈ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವ ವಿಶೇಷ ಜವಾಬ್ದಾರಿಕೆಯನ್ನು ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹೊರಿಸಿದ್ದೇವೆ. ಈ ಕಾರ್ಯಕ್ರಮ ಸಮರ್ಪಕವಾಗಿ ನಡೆಯುವ ಸಲುವಾಗಿ 20 ಅಂಶದ ಕಾರ್ಯಕ್ರಮಕ್ಕೆ ಸಂಬಂಧವಾಗಿರುವ ತಾಲ್ಲೂಕು ಸಮಿತಿಗೆ ಇದರ ಪೂರ್ಣ ಜವಾಬ್ದಾರಿಯನ್ನು ಹೊರಿಸಿದ್ದೇವೆ. ಈ ಸಭೆಯ ಸದಸ್ಯರು ಅದರ ಅಧ್ಯಕ್ಷರಾಗಿದ್ದಾರೆ ಆದುದರಿಂದ, ಈ ಕಾರ್ಯಕ್ರಮದ ವಿಷಯದಲ್ಲಿ ವಿಶೇಷ ಮುತುವರ್ಜಿಯನ್ನು 20 ಅಂಶದ ಕಾರ್ಯಕ್ರಮದ ಸಮಿತಿಯವರು ವಹಿಸಿದಾಗ ಅನೇಕ ಕಡೆಗಳಿಂದ ಕೇಳಿಬರತಕ್ಕ ದೂರುಗಳನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ. ಇದರಿಂದ, ನಾವು ಹೆಚ್ಚು ಯಶಸ್ಸನ್ನು ಕಾಣಲಿಕ್ಕೆ ಸಾಧ್ಯವಿದೆ ಎಂಬ ನಂಬಿಕೆಯನ್ನು ತಾಳಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಕಾರ್ಯಕ್ರಮವನ್ನು 20 ಅಂಶದ ಕಾರ್ಯಕ್ರಮದ ಸಮಿತಿಗೆ ಒಪ್ಪಿಸಿದ್ದೀರಲ್ಲ ಅವರಿಗೆ ಏನು ಅಧಿಕಾರ ಕೊಟ್ಟಿದ್ದೀರಿ ? ಸುತ್ತೋಲೆಯಲ್ಲಿ ಏನೂ ಕಾಣಿಸಿಲ್ಲ. ಅಲ್ಲಿನ ಸಿಬ್ಬಂದಿಗೆ ಸಂಬಳ ಕೊಟ್ಟಿದ್ದಾರೆಯೇ ಇಲ್ಲವೆ, ಕೆಲಸ ಆಗಿದೆಯೇ ಇಲ್ಲವೆ ಎಂಬಂದನ್ನೆಲ್ಲ ನೋಡುವ ಅಧಿಕಾರವಾದರೂ ಆ ಸಮಿತಿಗೆ ಇದೆಯೇ ಇಲ್ಲವೆ ?

SRI M. VEERAPPA MOILY.—That committee can supervise, look into all defects and implementation of the programme etc. ಆದುದರಿಂದ, ನಾವು ಈಗ ಕೇಳಿರತಕ್ಕ ಯಾವ ದೂರುಗಳು ಇವೆ (ದುರುಪಯೋಗ ಪ್ರಕರಣಗಳು) ಅವುಗಳ ಬಗ್ಗೆ ನಾವು ಹೆಚ್ಚು ಮುತುವರ್ಜಿ ವಹಿಸಿದರೆ ಅವುಗಳನ್ನು ಖಂಡಿತವಾಗಿ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ. ಆಗ ಈ ಕಾರ್ಯಕ್ರಮ ಕೂಡ ಹೆಚ್ಚು ಬಲವಾಗುತ್ತದೆ. ಹಾಗೂ ದುರ್ಬಲ ವರ್ಗದ ಅಭಿವೃದ್ಧಿಗೆ ಸಹಾಯಕವಾಗುತ್ತದೆಂಬ ಭರವಸೆಯನ್ನು ತಾಳಿದ್ದೇವೆ. ಈ ಕಾರ್ಯಕ್ರಮದ ಬಗ್ಗೆ ಯೋಜನಾ ಆಯೋಗದ ಸದಸ್ಯರು ಬಂದಾಗ ಕೂಡ ಪ್ರಸ್ತಾಪ ಮಾಡಿದ್ದೇವೆ. ಇದಕ್ಕೆ ರಾಷ್ಟ್ರ ಮಟ್ಟದ ಒಂದು ಬೆಂಬಲವನ್ನು ಕೂಡ ದೊರಕಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಇನ್ನು ಸೋಷಿಯಲ್ ಫಾರೆಸ್ಟ್ರಿಯನ್ನು ತೆಗೆದುಕೊಂಡರೆ ನಾವು ಯಾವಾಗಲೂ ಇದರ ಬಗ್ಗೆ ಸಾಕಷ್ಟು ಹೇಳುತ್ತಿರುತ್ತೇವೆ. ಆದರೆ ಈ ಬಾರಿ ಇದರ ಬಗ್ಗೆ ಕೇಂದ್ರ ಸರ್ಕಾರ ಕೂಡ ಒಂದು ವಿಶೇಷವಾದ ಯೋಜನೆಯನ್ನು ಮಾಡುತ್ತಿದೆ. ಆ ವಿಶೇಷ ಯೋಜನೆಗೆ ಸಮನ್ವಯವಾಗಿ ನಮ್ಮ ರಾಜ್ಯ ಸರ್ಕಾರ ಕೂಡ ಒಂದು ಯೋಜನೆಯನ್ನು ಹಾಕಬೇಕಾಗಿದೆ. ಏಕೆಂದರೆ, ಇವತ್ತಿನ ದಿವಸ ಗೃಹ ಬಳಕೆಗೆ ಮತ್ತು ಕಾರ್ಖಾನೆಗಳಿಗೆ ಎಲ್ಲ ಇಂಧನದ ಕೊರತೆ ಬಹಳವಾಗಿದೆ. ಈ ದಿಸೆಯಲ್ಲಿ ನಾವು ಕೂಡ ವಿಶೇಷವಾದ ಗಮನವನ್ನು ಈ ಬಾರಿ ಕೊಟ್ಟಿದ್ದೇವೆ. ಇನ್ನು social security measures ಅನ್ನು ತೆಗೆದುಕೊಂಡರೆ ಇದೂ ಕೂಡ ನಾವು ವಿಶೇಷವಾಗಿ ಹಾಕಿಕೊಂಡ ಒಂದು ಕಾರ್ಯಕ್ರಮ ಇದರಲ್ಲಿ ಬೀಡಿ ಕಾರ್ಮಿಕರು, ಟಾಡಿ ಟ್ಯಾಪರ್ಸ್, ಹ್ಯಾಂಡ್‌ಲೂಂ ವೀವರ್ಸ್, ಮತ್ತು ಆಯವ್ಯಯ ಭಾಷಣದಲ್ಲಿ ತಿಳಿಸದೆ ಇರುವ fishermenಗೂ ಕೂಡ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಡಬೇಕೆಂಬ ಉದ್ದೇಶವನ್ನಿಟ್ಟು ಕೊಂಡಿದ್ದೇವೆ. ಇದರ ಪ್ರಕಾರ ಅವರನ್ನು ಸಾಮೂಹಿಕ ವಿಮಾ ಯೋಜನೆಗೆ ಸೇರಿಸಬೇಕೆಂಬ ಕಾರ್ಯ

ಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಇದರಿಂದ ಈ ವರ್ಗಕ್ಕೆ ಸೇರಿದ ಸುಮಾರು ೧೦ ಲಕ್ಷ ಜನರನ್ನು (ಬೀಡಿ ಕಾರ್ಮಿಕರು, ಟಾಡಿ ಟ್ಯಾಪರ್ಸ್, ನೇಕಾರರು ಮತ್ತು ಮೀನುಗಾರರು) ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಸೇರಿಸಬೇಕೆಂಬುದೇ ಈ ಬಾರಿಯ ನಮ್ಮ ನೀತಿಯಾಗಿದೆ. ಆದುದರಿಂದ, ಏನು ಮಾನ್ಯ ಸದಸ್ಯರುಗಳು ಟೀಕೆ ಮಾಡಿದ್ದಾರೆ. ಅದಕ್ಕೆ ನಾವು ನಮ್ಮ ನೀತಿ ಗುರಿ ಏನು ಎಂಬುದನ್ನೆಲ್ಲ ಆಯವ್ಯಯ ಭಾಷಣದಲ್ಲಿ ಸ್ಪಷ್ಟವಾಗಿ ಕಾಣಿಸಿದ್ದೇವೆ. ನಮ್ಮ ಆಯವ್ಯಯ ಪತ್ರದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ನಿರೂಪಣೆ ಮಾಡಿದ್ದೇವೆ. ಪಾಲಿಸಿ ಇಂಪ್ಲಿಮೆಂಟೇಷನ್ ಮಾಡುವ ದಾರಿಯಲ್ಲಿ our directive is very clear. It is a deliberate rural bias. ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಕೂಡ ಬಜೆಟ್‌ನಲ್ಲಿ ಕಾಣಿಸಿದ್ದೇವೆ. ಗ್ರೋತ್ ರೇಟನ್ನು ಸಾಧನೆ ಮಾಡುತ್ತೇವೆಂದು ಬಜೆಟ್ಟಿನಲ್ಲಿ ಕಾಣಿಸಿರುವುದರ ಬಗ್ಗೆ ಮಾನ್ಯ ಸದಸ್ಯರುಗಳು ಸದನದಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷ ಗ್ರೋತ್ ರೇಟ್ ಎಷ್ಟಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಹೇಳುತ್ತೇನೆ. ಮುಖ್ಯವಾಗಿ ಬಂದ ಟೀಕೆ ಎಂದರೆ Plan details provided are inadequate ಎಂಬುದು ಮತ್ತು 'the long term record of growth of Karnataka's economy has been very much low. These are the twin criticisms which were levelled. ಗ್ರೋತ್ ರೇಟನ್ನು ಲೆಕ್ಕ ಹಾಕುವಾಗ ಒಂದು ವರ್ಷಕೆ ಇಂತಿಷ್ಟೇ ಎಂದು ಲೆಕ್ಕ ಹಾಕುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಎಷ್ಟಿದೆ ಎಂಬುದನ್ನು ಹೇಳಿ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೇಳುತ್ತೇನೆ. ಗ್ರೋತ್ ರೇಟನ್ನು ಲೆಕ್ಕ ಹಾಕುವ total investment consists of investment in public sector an investment in Private Sector. ಎರಡನ್ನೂ ಲೆಕ್ಕ ಹಾಕುತ್ತೇವೆ. ಬರೀ ಖರ್ಚು ಮಾಡುವುದನ್ನು ಮಾತ್ರ ಲೆಕ್ಕ ಹಾಕಿ ಉಳಿದಿದ್ದನ್ನು ಬಿಟ್ಟು ಗ್ರೋತ್ ರೇಟನ್ನು ಲೆಕ್ಕ ಹಾಕುವುದಿಲ್ಲ. ಆ ರೀತಿ ಹಾಕುವುದಕ್ಕೂ ಆಗುವುದಿಲ್ಲ. The public sector investment includes both the State Public Secor and the Central Public Sector. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಗ್ರೋತ್ ರೇಟನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. The Public sector and the Private sector ratio is 60:40. ಈ ಪ್ಲಾನ್ ಔಟ್ ಲೇ ನಲ್ಲಿ ನಾವು ೪೧೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. This pertains only to State Public Sector. ನಾವು ಬೆಳವಣಿಗೆಯ ಹಂತವನ್ನು ಲೆಕ್ಕ ಹಾಕಿದಾಗ Central Public Sector investment, estimated private sector investment in Industry, Agriculture, Transport and all other spheres of gainful economic activities in the Private sector ಇದನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಈ ಆಧಾರದ ಮೇಲೆ ೭.೫ ಪರ್ಸೆಂಟ್ ಗ್ರೋತ್ ರೇಟ್ ಎಂದು ನಾವು ಕಾಣಿಸಿದ್ದೇವೆ. ರಿಸರ್ವ್ ಬ್ಯಾಂಕ್ ಅಧ್ಯಯನದ ಪ್ರಕಾರ the study on the State income of different States etc., published by the Reserve Bank of India in April, 1978, the Karnataka's highest long term growth rate on the basis of the constant prices during the years 1960-61 to 1974-75 was 5.2% as against 3.1% all India (roughly). During the period from 1971 to 1975 at constant prices taking into consideration 1961 as base year, Karnataka achieved the highest growth rate of 2.6% as against 2.21% of all-India. Even these highest growth rates of Karnataka are based on the constant prices during the year 1960-61. The growth rate was 6.4% and according to the Reserve study it would be still higher. It is definitely more than

SRI K. H. SRINIVAS.—Sir, This is a conflicting matter. Here, the crux of the matter is, after all the growth rate is relevant to indicate where we are able to maintain and improve upon the development that is the speed of development and tempo of development. The growth rate aimed to achieve at 7.5%, more or less is just on the border of the existing growth rate itself. In the ultimate, what I want to say is, it is not a sign of any special efforts or any big lead forward.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಸ್ವಾರಸ್ಯವಾಗಿದೆ. ಮಾನ್ಯ ವಿರೋಧ ಪಕ್ಷದ ಉಪನಾಯಕರು ೭.೫ ಪರ್ಸೆಂಟ್ ಗ್ರೋತ್ ರೇಟನ್ನು ಹೆಚ್ಚು ಮಾಡುವುದಕ್ಕೆ ಆಗುವುದೇ ಇಲ್ಲ ಎಂದು ಸವಾಲು ಹಾಕಿದರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಗ್ರೋತ್ ರೇಟ್ ಎಂದರೆ ಒಂದೇ ತರಹ ಇರುವುದಿಲ್ಲ. ಎರಡು ಮೂರು ರೀತಿ ಇದೆ. ಅವರು ಒಂದು ಅನಾಲಿಸಿಸ್ ಪ್ರಕಾರ ೭.೫ ಪರ್ಸೆಂಟ್ ಆಗುವುದಿಲ್ಲ ಎಂದು ಹೇಳಿದರು. ೭.೫ ಪರ್ಸೆಂಟ್ ಯಾವ ಬೇಸಿಸ್ ಮೇಲೆ ಹೇಳುತ್ತೀರಿ ಎಂಬ ಸ್ಪಷ್ಟೀಕರಣವನ್ನು ಅವರು ಕೇಳಿದ್ದಾರೆ. ಮುಂದಿನ ವರ್ಷ ನೋಡೋಣ ಇದು ಎಷ್ಟರಮಟ್ಟಿಗೆ ಸಾಧನೆಯಾಗುತ್ತದೆ ಎಂದು.

SRI M. VEERAPPA MOILY.—So, the Hon. Member has agreed that 7.5% growth rate could be achieved.

† ಶ್ರೀ ಜೆ. ಹೆಚ್. ಪಟೇಲ್.—ನಿಮ್ಮ ಪಂಚವಾರ್ಷಿಕ ಯೋಜನೆಯ ಡ್ರಾಫ್ಟ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದೀರಿ. ೧೯೭೮ ರಿಂದ ೧೯೮೩ ರವರೆಗೆ ೫ ವರ್ಷದಲ್ಲಿ ೨.೨೫೦ ಕೋಟಿ ರೂಪಾಯಿ ಖರ್ಚು ಮಾಡಿದರೆ ೭½ ಪರ್ಸೆಂಟ್ ಆಗುತ್ತದೆಂದು ನೀವೇ ಹೇಳಿದ್ದೀರಿ. ಅದರ ಪ್ರಕಾರ ತೆಗೆದುಕೊಂಡರೆ ೧೯೭೮ ರಿಂದ ೧೯೮೩ ರವರೆಗೆ ಅಷ್ಟು ಖರ್ಚು ಮಾಡುವುದಕ್ಕಾಗುವುದಿಲ್ಲ. ೧೯೭೭–೭೮ ರಲ್ಲಿ ೩೩೨ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ನಂತರ ೩೬೦ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಈ ವರ್ಷ ೩೯೨ ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಈ ರೀತಿ ಹೋದರೆ ೧೯೮೩ರ ಹೊತ್ತಿಗೆ ೨೨೫೦ ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ೧೯೦೦ ಕೋಟಿಗೆ ನಿಲ್ಲುತ್ತೀರಿ. ಇನ್ನು ೬೫೦ ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ವೈಜ್ಞಾನಿಕವಾಗಿ ತೀರ್ಮಾನವಾಗಿರುವುದನ್ನು ಹೇಳಿದೆ. ೭½ ಪರ್ಸೆಂಟ್ ನೀವು ತೋರಿಸಬೇಕಾದರೆ ಈ ವರ್ಷ ೫೫೨ ಕೋಟಿ ರೂಪಾಯಿ ಖರ್ಚು ಮಾಡಬೇಕು. ಹಾಗೆ ಮಾಡಿದರೆ ವೃದ್ಧಿಯಾಗುತ್ತದೆಂದು ಆರ್ಥಿಕ ತಜ್ಞರು ಹೇಳಿದ್ದಾರೆ. ಅಂಕಿಅಂಶಗಳ ಮಿರೇಜ್ ನೋಡಿ ಬೆಳವಣಿಗೆಯಾಗಿದೆ ಎಂದು ತಿಳಿದು ಕೊಳ್ಳಬೇಡಿ. ನಮ್ಮ ಕರ್ನಾಟಕದ ಪರ್‌ಕ್ಯಾಪಿಟಾ ಇನ್‌ಕಂ ಕಡಿಮೆಯಾಗಿದೆ. ಎಕನಾಮಿಕ್ ಸರ್ವೇನಲ್ಲಿ ಹಿಂದಿನ ವರ್ಷ ೭೨೦ ಇದ್ದದ್ದು ೭೧೬ ಕ್ಕೆ ಇಳಿದಿದೆ. ಕರ್ನಾಟಕದ ತಲಾ ವರಮಾನ ಕಡಿಮೆ ಯಾಗಿದೆ.

SRI M. VEERAPPA MOILY.—The argument of Sri J. H. Patel is not correct because he has exclusively taken the public sector investment. ಅವರ ವಾದ ವೈಜ್ಞಾನಿಕವಾಗಿ ಸರಿಯಿಲ್ಲ. He has left out the Central investment and private sector investment. ಬರೀ ರಾಜ್ಯದಲ್ಲಿ ಖರ್ಚು ಮಾಡುವ ಹಣವನ್ನೇ ಪ್ರತ್ಯೇಕಿಸಿ ಅವರು ಲೆಕ್ಕಾಚಾರ ಮಾಡುತ್ತಿದ್ದಾರೆ. ಇದು ವೈಜ್ಞಾನಿಕ ಅರ್ಥಶಾಸ್ತ್ರದ ಪ್ರಕಾರ ಸರಿ ಇಲ್ಲ.

SRI MICHAEL B. FERNANDES.—I think the Hon. Minister is trying a mathematical jugglery. He is trying to point out that 5 and odd

percent growth would be arround 8 percent taking the constant price factor into consideration. Then the 7.5% growth with those factors would be about 12%. He is trying to prove taking into consideration the factors the 7.5% growth rate to 12% growth rate. That may be again beyond our reach.

SRI M. VEERAPPA MOILY.—The growth rate of Karnataka during 1979-80 at constant price was positive. ಆದರೆ ಇಡೀ ದೇಶದ ಅಭಿವೃದ್ಧಿಯನ್ನು ಗಮನಿಸಿದರೆ, it is a negative growth of more than 3% that is minus three percent growth.

SRI MICHAEL B. FERNANDES.—Let us not discuss that point.

ಶ್ರೀ ಜೆ. ಹೆಚ್. ಪಟೇಲ್.—ಅವರು ಹೇಳುತ್ತಿರುವುದು, ಎರಡು ಕಣ್ಣು ಇಲ್ಲ; ಒಂದೇ ಈಗ ಇರುವುದು ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಎರಡು ವರ್ಷಗಳ ಅವಧಿಯಲ್ಲಿ ಎರಡೂ ಕಣ್ಣುಗಳು ಹೋದವು, ಒಂದೂ ಈಗ ಉಳಿದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇನ್ನು, ಸಾಧನೆ ವಿಚಾರ ನಾವು ಅನೇಕ ಸಾಧನೆಗಳನ್ನು ಮಾಡಿದ್ದೇವೆ. ಆದರೆ, ಐದಾರು ತಿಂಗಳಲ್ಲಿ ಏನನ್ನೂ ಸಾಧಿಸಿಲ್ಲ, ಏನನ್ನೂ ಮಾಡಿಲ್ಲ ಎಲ್ಲಾ ಸ್ಥಗಿತವಾಗಿದೆ ಎಂದು ಕೆಲವರು ಹೇಳಿದ್ದಾರೆ. If you judge the movement as between the legislators' home and the Ballbrooie our performence is practically nil. With regard to physical targets within a period of five months, I can say it with proud that our performance was quite good. ತಮಗೆಲ್ಲಾ ತಿಳಿದ ಹಾಗೆ ಇಡೀ ದೇಶದಲ್ಲಿ ಒಂದು ರೀತಿಯಾದ financial crisis and distress ಇತ್ತು. ಆ ಸಂದರ್ಭದಲ್ಲಿ ನಮಗೆ ಆರ್ಥಿಕ ಸಹಾಯ ನೀಡಿದ್ದಕ್ಕಾಗಿ ಈ ಸದನದ ಮೂಲಕ ನಾವು ಕೇಂದ್ರ ಸರ್ಕಾರಕ್ಕೆ ಆಭಾರ ಮನ್ನಣೆ ಸಲ್ಲಿಸಬೇಕಾಗಿದೆ. ಕಷ್ಟ ಕಾಲದಲ್ಲಿ ನಾವು ಕೇಂದ್ರ ಸರ್ಕಾರವನ್ನು ಮೂವತ್ತು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದಾಗ The Government of India have given Rs. 20 Crores as ways and means advance. It is apart from other taxes due to us from the Central Government mainly the excise or the small savings. When I requested Central Government for this financial assistance, they have promptly complied with my request and they have released Rs. 20 Crores, ನಾವು ಕೇಂದ್ರ ಸರ್ಕಾರದಿಂದ ವಿಶೇಷ ನೆರವನ್ನು ಕೇಳಿದ್ದೆವು. ಅವರು 20 ಕೋಟಿ ರೂಪಾಯಿಗಳನ್ನು ways and means ಆಗಿ ನೀಡಿದ್ದಾರೆ. ಅದನ್ನು ವಿಶೇಷ ನೆರವನ್ನಾಗಿ ಪರಿಗಣಿಸಬೇಕೆಂದು ನಾವು ಕೇಳುತ್ತಿದ್ದೇವೆ. While releasing Rs 20 Crores the Central Government has not adjusted towards any share due to us. Thereafter they have released our share on account of small savings. We are confident that this amount of Rs. 20 Crores given to us will be converted into special assistance.

ಶ್ರೀ ಎಸ್. ಆರ್. ಬೊಮ್ಮಾಯಿ,—ಇದನ್ನೂ ಸಾಧನೆ ಎನ್ನುವ ಅರ್ಥ ಮಂತ್ರಿಗಳಿಗೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ನಮ್ಮ ರಾಜ್ಯಕ್ಕೆ ನೀಡಿದಂತೆ ಉಳಿದೆಲ್ಲ ರಾಜ್ಯಗಳಿಗೂ ನೀಡಿದ್ದಾರೆ, ನಮ್ಮ ರಾಜ್ಯವೊಂದಕ್ಕೇ ನೀಡಿಲ್ಲ. ಇದೇನೂ ಸಾಧನೆಯಲ್ಲ.

SRI K. H. SRINIVAS.—There is a provision of Rs. 3½ Crores towards ways and means advance. This Rs. 20 Crores ways and means advance cannot be treated as special assistance, it has to be treated

as overdraft. This only shows that you are again relapsing into the old practice of depending heavily on the Government of India and incur ing this overdraft system.

SRI M. VEERAPPA MOILY.—Let us wait and see how this special assistance by the Government of India would be treated. I can say that this is an achievement of our Government. This is on account of good support between the Government of India and the State Government, we could get Rs. 20 Crores. This is an achievement on account of our relationship with the Central Govornment. ವಿಶೇಷ ನೆರವನ್ನು ಓವರ್‌ಡ್ರಾಫ್ಟ್‌ಗೆ ಹೋಲಿಸುವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ,—೧೯೭೭ರಲ್ಲಿ ಶ್ರೀ ಫೋರ್ಪಡೆಯವರು ಈ ರಾಜ್ಯದ ಅರ್ಥ ಮಂತ್ರಿಯಾಗಿ ಅವರ ಮೊದಲನೇ ಆಯವ್ಯಯವನ್ನು ಮಂಡಿಸಿದ್ದರು, ಆಗ ಅವರೂ ಕೂಡ ಮೂವತ್ತು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದರು. ಅದು ಓವರ್ ಡ್ರಾಫ್ಟ್ ಆಯಿತು. ಹಾಗೇಯೇ, ಇದನ್ನೂ ಮಾನ್ಯ ಅರ್ಥ ಮಂತ್ರಿಗಳು ಒಂದು ಸಾಧನೆ ಎಂದು ಹೇಳಿಕೊಳ್ಳುವುದಾದರೆ, ಸಾಧನೆಗೊಂದು ಅರ್ಥವಿರಬೇಕಾಗುತ್ತದೆ.

SRI MICHAEL B. FERNADEZ.-At that time the Centre had not taken our State for granted; but today it has taken the people of Karnataka for granted. That is why the financial assistance is less this time.

SRI M. VEERAPPA MOILY.—What has been done is a fact, nobody can say that it is not a fact.

SRI K. H. SRINIVAS.—What you claim is not right. Our submission is that cannot be termed as an achievement on your part. Any thing above Rs. 3½ Crores ways and means advance will have to be termed as overdraft for all practical purposes so far as we are concered, unless the Centre agrees to give that amount as special assistance, which it is not obviously given, it cannot be considered an achievement

ಶ್ರೀ ಎಂ. ವೀರಪ್ಪ ಮೊಯಿಲಿ.—೨೦ ಕೋಟಿ ರೂಪಾಯಿಗಳು ಕೇಂದ್ರದಿಂದ ಒಂದು ವೇಳೆ ಬರದಿದ್ದರೆ ಆಗ ಇದೇ ಸದಸ್ಯರುಗಳು ಇದೇ ಸಭೆಯಲ್ಲಿ “ ನೀವು ಏನು ಮಾಡಿದಿರಿ ಎಂದು ಕೇಳುತ್ತಿದ್ದರು. ಈಗ ನಾವು ಹಣ ಪಡೆದಿರುವುದರಿಂದ ಅವರು ಈ ರೀತಿ ಹೇಳುತ್ತಿದ್ದಾರೆ. This is an argument which can be confronted in both ways.

Irrigation Projects and Power Projects:

ಇದರ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಮಾತನ್ನು ಹೇಳಿ, ಇಲ್ಲಿ ಏನೂ ಕೆಲಸವಾಗಿಲ್ಲವೆಂದು ಹೇಳಿದ್ದಾರೆ. ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಯಾರನ್ನೊ ಹಾಕಿದ್ದೀರಿ. ನ್ಯಾಯಾಧೀಶರಾದ ರಂಗೇಗೌಡರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಎಲ್ಲಾ ಕೆಲಸಗಳನ್ನೂ ಸ್ಥಗಿತಗೊಳಿಸಿದ್ದೀರಿ ಎಂದು ಅವರು ಹೇಳಿದ್ದಾರೆ. ಆದರೆ, ವಾಸ್ತವವಾಗಿ ಕೆಲಸ ಸ್ಥಗಿತವಾಗಿಲ್ಲ. ನಿಜ ಹೇಳಬೇಕೆಂದರೆ ಅಲ್ಲಿ ಕೆಲಸ ಇನ್ನೂ ಹೆಚ್ಚು ತ್ವರಿತಗತಿಯಿಂದ ಆಗುತ್ತಿದೆ. October 1979 to December 1979, for Kalinadi First Stage, we have incurred an expenditure of Rs. 555-20

lakhs. From January 1980 to June 1980 we have spent Rs. 13,14,73,000. We have definetly spent more money and the work iin progress.

SRI K. H. SRINIVAS.—You must have paid the old bills.

SRI M. VEERAPPA MOILY.—You can see the progress target-wise. This is the physical target which we have achieved.

SRI S. R. BOMMAI.—In Kalinadi Project, whether power is being generated is important. Whether construction work or any other progress is done, is not important. You should have compared the figures of the last one year. If you want to do justice, compare the progress of the six months of this year with the corresponding period of six months of the previous year. Compare the amount, what is the physical achievement etc. during those periods ? More important than all this is whether power generators have been installed and whether power is being generated.

SRI M. VEERAPPA MOILY.—Sir, I think it is better if there are no more interruptions.

SRI S. R. BOMMAI.—The Hon. Minister can go in his own way. We do not want to interrupt.

SRI M. VEERAPPA MOILY.—The Hon.Members can interrupt but it should not be frequently. In the year 1979-80, out of the allotment of Rs. 106 Crores, expenditure is only Rs. 65 Crores. I am telling about the physical targets. It is not to criticise the previous Government. After all it is not my intention but I am telling about the physical targets which are achieved and which we are able to achieve. Rs. 41 Crores could not be spent. I think, to that extent Mr. Srinivas will agree.

SRI K. H. SRINIVAS.—There are valid reasons as to why we could not spend.

SRI M. VEERAPPA MOILY.—I am sorry, I am not yeilding . Only 6% achievement was there during the last year. I am not going into more details because when the regular demands come, it will be taken up in detail. Now I am trying to confine my speech to the policy matters only. As far as Power Supply from Kerala is concerned there was no agreement. There is no written agreement entered into by the previous Government and the Government of Kerala. No, they are saying that we have given more amount to Kerala.

SRI K. H. SRINIVAS.—Sir,......

SRI M. VEERAPPA MOILY.—I am not yeilding.

SRI K. H. SRINIVAS.—This has got to be rebutted.

SRI M. VEERAPPA MOILY.—There was no agreement as such between the previous Government and the Government of Kerala for supply of energy. It was based on the provision of the minutes of discussion. It cannot become an agreement. It is only a minutes of discussion.

SRI S. R. BOMMAI.—Both the Governments have announced it simultaneously.

SRI K. H. SRINIVAS.—While I announced it on the floor of this House, the then Chief Minister of Kerala who was also the Electricity Minister announced the terms on the floor of the Kerala Assembly.

SRI M. VEERAPPA MOILY.—The annoucement cannot become an agreement. Would any body call it an agreement ?

SRI M. C. NANAIAH.—Announcement is a solemn commitment· It is much more than an agreement.

SRI S. R. BOMMAI.—International agreements have been based on announcements.

SRI M. VEERAPPA MOILY.—What the hon. Members are saying that there was an agreement, is not correct. There may have been announcement. To that extent, it may be an understanding. One cannot call it an agreement. On 27th February 1979, minutes were drawn up. According to that minute, 1000 million units per annum commencing from 1st July 1979 were to be supplied at the rate agreed to be paid by Karnataka *i.e.*, 18 paise per unit up to 500 million unites and 20 paise per unit for the excess. This was the substance of the minutes. In the minutes, it is not mentioned that the entire surplus energy of Kerala over and above 1000 million units should be made available to Karnataka. That is why, the Kerala Government has the option to supply energy to Karnataka or any other State. In view of the high tariff of 28 paise per unit offered by Tamil Nadu, Kerala Government could have supplied surplus energy over and above 1000 million units to Tamil Nadu in order to mobilise more resources which was their main aim in having bilateral agreement. That is why the Karnataka Government got the deal finalised by offering higher tariff than that offered by Tamil Nadu.

Now, I will come to the points of Irrigation. For the year 1980-81, a fresh potential of 68,550 hectares in major irrigation and 35,138 hectares in medium irrigation involving an outlay of Rs. 100/- crores is proposed to be achieved. This is the aim of our Government. ಸರ್ಕಾರದವರು ಒಳ್ಳೆಯ ಉದ್ದೇಶದಿಂದ ಹಣ ಖರ್ಚು ಮಾಡಿ ಅನೇಕ ಪ್ರಾಜೆಕ್ಟುಗಳನ್ನು

ತೆಗೆದುಕೊಂಡಿದ್ದಾರೆ. ಆದರೆ, ಯಾವ ರೀತಿಯಲ್ಲಿ ಸಾಧನೆ ಮಾಡಲಿಕ್ಕೆ ಸಾಧ್ಯ ಎಂಬುದನ್ನು ನೋಡಬೇಕು. ಇವತ್ತು ನೀರಾವರಿ ಯೋಜನೆಗಳಿಗೆ ಭಾರಿ ಹಣವನ್ನು ಒದಗಿಸಿದ್ದೇವೆ. ಈ ಸಾಲಿನ ಆಯವ್ಯಯದಲ್ಲಿ ನೀರಾವರಿ ಯೋಜನೆಗಳಿಗಾಗಿ ೫-೬ ತಿಂಗಳಲ್ಲಿ ೯೯.೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗಾಗಿ ೧೪.೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಾವು ಇಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳದೇ ಇದ್ದರೆ ಇಷ್ಟೊಂದು ಸಾಧನೆ ಮಾಡಲಿಕ್ಕೆ ಆಗುತ್ತಾ ಇರಲಿಲ್ಲ. ಅದು ಏನಾಗಿದೆ ಎಂದರೆ ತಾವು ಅಧಿಕಾರ ಬಿಟ್ಟು ಕೂಡಲೇ ಎಲ್ಲಾ ಸ್ಥಗಿತವಾಗಿತ್ತು. That argument was advanced stating that "It is a non-performing Government. It is not a performing Government". That was the main theme, Otherwise I would not have stated it.

ಶ್ರೀ ಜೆ. ಹೆಚ್. ಪಟೇಲ್,—ಲಂಚ, ಗಿಂಚ ತೆಗೆದುಕೊಳ್ಳುವುದು ಹೆಚ್ಚಾಗಿದೆ ಎಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಅನುಭವಕ್ಕೆ ಬಂದಿಲ್ಲ, ತಮ್ಮ ಅನುಭವಕ್ಕೆ ಬಂದಿದ್ದರೆ ಹೇಳಿ. So, my friends will agree that we are a performing Government and not a non-performing Government. So, I will not proceed with that. But, we have demonstrated that we can take that challenge and get over the power crises. ಪವರ್ ಕ್ರೈಸಿಸ್ ಬಂದಾಗ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ಪವರ್ ಕ್ರೈಸಿಸ್ ೧೦೦ ಪರ್ಸೆಂಟ್ ಪವರ್ ಕಟ್ ಆಗುವ ಪರಿಸ್ಥಿತಿಗೆ ಬಂದಿತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಪರಿಸ್ಥಿತಿಗೆ ಬಂದಿರಲಿಲ್ಲ. ನೀವು ಅನಾವಶ್ಯಕವಾಗಿ ಮಾಡಿದ್ದೀರಿ ಎಂದು ನಾವು ಹೇಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಏಪ್ರಿಲ್ ೩೦ನೇ ತಾರೀಖು ನಿಲ್ಲಿಸಬೇಕಾದ್ದು, ೧೫ನೇ ತಾರೀಖು ಏತಕ್ಕೆ ನಿಲ್ಲಿಸಿಬಿಟ್ಟಿರಿ ಎಂದರೆ ಏನು ಹೇಳಬೇಕು.

SRI K. H. SRINIVAS.—You have taken that decision overnight. I appeal to you, if you cannot defend certain decisions, fairly concede. Please do not make futile efforts.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಇವರೇನು ಈ ಪವರ್‌ನಲ್ಲಿ ...... Let them not claim and boast that they left us with self-sufficient in power.

ಶ್ರೀ ಎಸ್. ಆರ್. ಬೊಮ್ಮಾಯಿ.- ಅಧ್ಯಕ್ಷರೆ, ೨೪ ಗಂಟೆಯಲ್ಲಿ ಸರಿಪಡಿಸುವ ಶಕ್ತಿ ಇದ್ದರೆ, ೧೫ ದಿವಸದ ಪವರ್ ಇದ್ದರೆ ಅದನ್ನು ಮೊದಲೆ ಏತಕ್ಕೆ ನಿಲ್ಲಿಸಿದಿರಿ. ೨೪ ಗಂಟೆಯಲ್ಲಿ ಮಾಡುವುದು ಏತಕ್ಕೆ ಮತ್ತೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದು. ಏತಕ್ಕೆ. ಒಂದು ದಿವಸದಲ್ಲಿ ಏನೂ ಆಗುತ್ತಿರಲಿಲ್ಲ ಭಾರತ ಸರ್ಕಾರದ ಮೇಲೆ ಈ ತರಹ ಪ್ರೆಷರ್ ಟ್ಯಾಕ್‌ಟಿಕ್ಸ್ ತರುವುದು ೨೪ ಗಂಟೆಯಲ್ಲಿ ಈ ರೀತಿ ಮಾಡಿರುವುದು ಇದನ್ನು ನೋಡಿದರೆ ನಂಬುವುದಕ್ಕೆ ಕಷ್ಟವಾಗುತ್ತದೆ.

SRI A. LAKSHMISAGAR.—From where did he get this power? Is it from heaven?

ಶ್ರೀ ಎ. ಜಿ. ಕೊಡಗಿ.—ಹೊಸ ಜನರೇಟಿಂಗ್ ಏನಾದರೂ ಆಗಿದೆಯೋ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಈ ಸದನದಲ್ಲಿ ಬಂದಿದೆ. ಅದರ ಬಗ್ಗೆ ಡೀಟೈಲ್ಸ್ ಎಲ್ಲಾ ಕೊಟ್ಟಿದ್ದೇವೆ. ಕೇರಳ ಸರ್ಕಾರ ಅಷ್ಯೂರೆನ್ಸ್ ಮಾಡಿದ್ದು ಕ್ಲುಪ್ತ ಕಾಲಕ್ಕೆ ಬಂತು. ಈ ಬಗ್ಗೆ ವಿವರವಾದ ಚರ್ಚೆ ಆಗುವುದಿದ್ದರೆ ಈ ಡಿಮ್ಯಾಂಡ್ ಬಂದಾಗ ಮಾನ್ಯ ಸದಸ್ಯರು ಮಾತನಾಡಬಹುದು. ಆದರೆ ಈ ಪವರ್ ಕ್ರೈಸಿಸ್ ಬಂದಾಗ ಅದನ್ನು ಎದುರಿಸುವಂತಹ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಷ್ಟ ಪಡುತ್ತೇನೆ. ಇವೊತ್ತು ಡಿಫೆಂಡ್ ಮಾಡಬೇಕಾದ್ದನ್ನು

ಮಾಡಲೇ ಬೇಕಾಗುತ್ತದೆ. ಅದರಲ್ಲಿ ನಾಚಿಕೆ ಇಲ್ಲ. ಈ ಬಗ್ಗೆ we need not be guilty. After all that was the position, the naked truth. Power crisis is not created by us. I am not going into any more detail. ನಿಜವಾಗಿಯೂ ಕೂಡ ವಿದ್ಯುತ್ ಯೋಜನೆಗಳನ್ನು ಕಾರ್ಯಗತ ಮಾಡುತ್ತಾ ಇದ್ದರೆ ಈ ಬಗ್ಗೆ ಹೆಚ್ಚು ಮುತುವರ್ಜಿ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಹಿಂದಿನ ಸರ್ಕಾರದವರು ನಿಮ್ಮ ಸರ್ಕಾರದವರು ಕೂಡ ಜವಾಬ್ದಾರರು.

SRI M. VEERAPPA MOILY.—I am not accusing him, but I am telling.

SRI K. H. SRINIVAS.—Let us not mix up the issue. The question of power production is different.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ, ತಾವು ಜನವರಿಯಲ್ಲಿ ಅಧಿಕಾರ ಬಿಟ್ಟಿರಿ. ತಾವು ಮೊದಲೇ ಸರಿಪಡಿಸಿದ್ದರೆ ಏಪ್ರಿಲ್‌ನಲ್ಲಿ ಈ ಪರಿಸ್ಥಿತಿ ಎದುರಿಸಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ನಾವು ಈ ನಿರ್ಣಯ ತೆಗೆದುಕೊಳ್ಳದೇ ಇದ್ದರೆ ನಮ್ಮ ರಾಜ್ಯ ಅನೇಕ ರೀತಿಯ ಒಂದು ಸಂಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತಿತ್ತು. ವಿವೇಚನೆ ಇಲ್ಲದೆ ವಿಚಾರ ಮಾಡಿ ಇದನ್ನು ಒಪ್ಪಿಕೊಳ್ಳಿ ಎಂದರೆ ಹೇಗೆ ಒಪ್ಪಿಕೊಳ್ಳಲಿಕ್ಕೆ ಆಗುತ್ತದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

We have taken an appropriate decision. Let us save this State from the power crisis and let us save the economy of the State and history will tell about it. We need not analyse it. ಇನ್ನು ಸೀಮೆಎಣ್ಣೆ ವಿಚಾರದಲ್ಲಿ ಕಷ್ಟವನ್ನು ಎದುರಿಸಬೇಕಾಗಿ ಬಂತು. Average rate of monthly allotment in 1978-80 was 16,000 tonnes to 18,000 tonnes and average monthly allotment in 1980-81 is around 20,000 tonnes. ನೀವು ರಾಜ್ಯದ ಪರಿಸ್ಥಿತಿ, ದೇಶದ ಪರಿಸ್ಥಿತಿ ನೋಡಿಲ್ಲ. Do you say that we automatically got it? ಇಷ್ಟು ಸಪ್ಲೈ ತರದೇ ಇದ್ದರೆ ನೀವು ಏನು ಮಾಡಿಲ್ಲ ಎಂದು ಹೇಳುತ್ತಿದ್ದೀರಿ. We did make some special efforts to get. This is really an important and special decision. 1979-80 ರಲ್ಲಿ ಅಷ್ಟೇನು ತೊಂದರೆ ಇರಲಿಲ್ಲ. ಈ ಕೊರತೆ ಇದ್ದ ಸಂದರ್ಭದಲ್ಲಿ ಸಾಕಷ್ಟು ಸಪ್ಲೈ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದೆ. ಇನ್ನು ರೀಟೈಲ್ ಪ್ರೈಸ್ ಇಂಡೆಕ್ಸ್ ಬಗ್ಗೆ ಹೇಳಬೇಕೆಂದರೆ ಬೆಲೆ ನಿಯಂತ್ರಣದ ಬಗ್ಗೆ ಈ ದಿಸೆಯಲ್ಲಿ ಏನೂ ಕೆಲಸ ಮಾಡಲಿಲ್ಲ ಎಂಬ ಒಂದು ವಿಚಾರ ಬಂದಿದೆ. All commodities index between December 1979 and May 1980, that was the stage. Either in the international field or in the national field the inflation was the highest. On that occasion also all commodities index was as follows ; December 1979 210, January 1980—209, February 1980—212, March 1980—212, April 1980—212 and May 1980—213. I think when compared to the All India average as on May 1980 it was 239.6. ಕರ್ನಾಟಕ ರಾಜ್ಯ ಬಾಕಿ ರಾಜ್ಯಗಳಿಗೆ ಹೋಲಿಸಿದರೆ ಮತ್ತು ಇಡೀ ದೇಶದ ವ್ಯಾಪಕವಾದಂಥ ಪರಿಸ್ಥಿತಿಗೆ ಹೋಲಿಸಿದರೆ ಬೆಲೆ ನಿಯಂತ್ರಣದ ವಿಚಾರದಲ್ಲಿ ನಾವು.........We have a part to play only in respect of catching the hoarders or creating fear in the minds of the traders not to misbehave. I think at certain levels, we can maintain the index at 210-213. I think this is not a much variation when compared to the All India figure, or when compared to the figures of the many other States.

೪-೩೦ ಪಿ.ಎಂ.

ಆದ್ದರಿಂದ ಬೆಲೆ ನಿಯಂತ್ರಣದ ವಿಚಾರದಲ್ಲಿ ಏನೂ ಮಾಡಲಿಲ್ಲ, ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದಾಗಿ ಹೇಳುವುದು ಹುರುಳಿಲ್ಲದ ವಾದ ಎಂಬುದಾಗಿ ನಾನು ಹೇಳುತ್ತಿದ್ದೇನೆ. I think it is not sustainable.

ಶ್ರೀ ಎಸ್.ಆರ್. ಬೊಮ್ಮಾಯಿ.--೧೯೭೮-೭೯ನೇ ಇಸವಿಯಲ್ಲಿ ಜನತೆಯಲ್ಲಿ ಇನ್‌ಪ್ಲೇಷನ್ ಹೆಚ್ಚಾಗಿದ್ದರೂ ಕೂಡ ಬೆಲೆಗಳು ಎಷ್ಟು ಇತ್ತು ಎಂಬುದರ ಅಂಕಿ ಅಂಶಗಳನ್ನೂ ಕೂಡ ದಯಮಾಡಿ ಸದನಕ್ಕೆ ಕೊಡಿ ಸ್ವಾಮಿ. Facts speak for two years. The World's inflationary rate was much higher than India during that period. It was only due to the efforts put forth by the Janatha Government.

ಶ್ರೀ ಎಂ. ವೀರಪ್ಪಮೊಯ್ಲಿ.—ಬಹುಶಃ ಬೊಮ್ಮಾಯಿಯವರು ಹೇಳುವುದು ಜನತಾ ಸರ್ಕಾರ ಇರುವಾಗ ಏನೇನು ಮಾಡಿದ್ದಾರೆ ಎಂಬುದಿರಬೇಕು. ೩ ಪರ್ಸೆಂಟ್ ಇನ್‌ಫ್ಲೇಷನ್ ಗ್ರೋತ್. ಆಗಿತ್ತು ಆದ್ದರಿಂದ ಇನ್‌ಫ್ಲೇಷನ್‌ನ್ನು ಎಷ್ಟು ಮಾತ್ರ ತಡೆಹಿಡಿದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಆ ರೀತಿ ಹೇಳುತ್ತಿದ್ದೀರಿ. ತಮ್ಮ ಎಕನಾಮಿಕ್ ಸರ್ವೆ ರಿಪೋರ್ಟ್ ತೆಗೆಸಿ ಎಷ್ಟಿತ್ತು ಎಂಬುದನ್ನು ನೋಡಿ ಸ್ವಾಮಿ. ನಿನ್ನೆ ಅದರ ಬಗ್ಗೆ ಒಂದು ನೋಟಿಫಿಕೇಷನ್ ಬಂದಿದೆ ಅದನ್ನು ತಾವು ನೋಡಿ, ನಂತರ ಹೇಳಿ.

ಶ್ರೀ ಜೆ.ಎಚ್. ಪಟೇಲ್.—ಇದರ ಬಗ್ಗೆ ಇರತಕ್ಕಂತಹ ಸಂಶಯವನ್ನು ಕ್ಲಿಯರ್ ಮಾಡಿಬಿಡುತ್ತೇನೆ. According to the survey the Industrial Production in 1979-80, shows a decline of 0.8% compared to 1978-79 figures and the average growth rate of 6.9% per year during the 4 years period *i.e.* during 1978. This was stated by Sri R. Venkataraman, Minister for Finance, Government of India, He has clearly said that there was price stability and there was increase in the growth rate during those two years. It is not my speech ಇದನ್ನು ಕೇಂದ್ರದಲ್ಲಿರತಕ್ಕಂತಹ ನಿಮ್ಮ ಪಕ್ಷದ ಸರ್ಕಾರದ ಹಣಕಾಸಿನ ಸಚಿವರೇ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವುದೋ isolated facts ತೆಗೆದುಕೊಂಡು ಹೇಳಿದರೆ ನಾನು ಅದಕ್ಕೆ ಏನು ಹೇಳಲಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ರೀತಿ ಹೇಳುವುದರಿಂದ ನಿಮಗೆ ಏನೂ ಪ್ರಯೋಜನವಾಗುವುದಿಲ್ಲ. ಹಾಗೇನಾದರೂ ತಾವು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಆದ್ದರಿಂದ ಆ ಎರಡು ವರ್ಷದ ಜನತಾ ಸರ್ಕಾರದ ಬಗ್ಗೆ ಮಾತು ಬೇಡ. ಈ ರಾಜ್ಯದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಜವಾಬ್ದಾರಿಯುತವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಜನತಾ ಸರ್ಕಾರ ಈ ದೇಶಕ್ಕೆ ಏನು ಮಾಡಿತು ಎಂಬುದು ಈ ಲೋಕಕ್ಕೇ ಗೊತ್ತಿದೆ. ಅದನ್ನು ನಾನು ಪುನಃ ಪುನಃ ಹೇಳಬೇಕಾಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮದೂ ಕೂಡ ಎಲ್ಲರಿಗೂ ಗೊತ್ತಿದೆ. ಅಧಿಕಾರವನ್ನು ಏಕೆ ಕಳೆದುಕೊಂಡಿರಿ ಎಂಬುದೂ ಗೊತ್ತಿದೆ. ಜನತಾ ಸರ್ಕಾರ ಜನತೆಗೆ ಮಾಡಿರುವಂತಹ ಒಂದು ಒಳ್ಳೆಯ ಕೆಲಸವನ್ನೂ ನೀವು ಎಂದೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಅದು ಒಂದು ಸತ್ತ ಕುದುರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೀವೂ ಒಂದು ಸಾರಿ ಸತ್ತ ಕುದುರೆಯಾಗಿದ್ದಿರಿ. ಆದರೆ ಮತ್ತೆ ನೀವು ಅಧಿಕಾರಕ್ಕೆ ಬಂದಿದ್ದೀರಿ. ಅದೇ ರೀತಿ ನಾಳೆ ನಾವೂ ಅಧಿಕಾರಕ್ಕೆ ಬರಹುದು.

ಶ್ರೀ ಎಚ್.ಡಿ. ದೇವೇಗೌಡ.—ಈ ಪ್ರಶ್ನೆಯನ್ನು ಮುಂದುವರಿಸುವುದಲ್ಲ......

ಅಧ್ಯಕ್ಷರು.—ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ದಯಮಾಡಿ ಮಧ್ಯೆ ಮಧ್ಯೆ ಪ್ರವೇಶ ಮಾಡಬೇಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮುಂಗಡ ಪತ್ರದ ಮೇಲೆ ಸದಸ್ಯರು ಮಾತನಾಡಿದ್ದಾರೆ. ಅದಕ್ಕೆ ನಿಮ್ಮ (ಅರ್ಥ ಮಂತ್ರಿಗಳ) ಉತ್ತರ ಕೊಡಿ. ನಂತರ ಸದಸ್ಯರು ರಾಜಕೀಯವಾಗಿ ಏನಾದರೂ ಹೇಳಿದ್ದರೆ ರಾಜಕೀಯ ಉತ್ತರ ಕೊಡಿ. ನಾನು ಬೇಡ ಎಂದು ಹೇಳುವುದಿಲ್ಲ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಏನು ಮಾಡಿದ್ದೀರಿ ಎಂಬುದಾಗಿ ಸದಸ್ಯರು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡಿ. ರಾಜಕೀಯ ಚರ್ಚೆ ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಚರ್ಚೆ ಬಂದಾಗ ಮಾತನಾಡೋಣ. Why should I beat the dead horse.

ಶ್ರೀ ಎಸ್.ಆರ್. ಬೊಮ್ಮಾಯಿ.—೭೭ನೇ ಇಸವಿಯಲ್ಲಿ ನಾವು ಬಂದಿದ್ದೆವು. Now in 1980 Smt. Indira Gandhi came to power because of that dead horse. ಆದ್ದರಿಂದ Please don't pass such uncharitable remarks 1985 ಕ್ಕೆ ನಮಗೆ ಜನ ಓಟು ಕೊಡಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದನ್ನೇ ನಾನು ಹೇಳುತ್ತಿರುವುದು. ಅದನ್ನು ಈ ದೇಶದ ಜನ ತೋರಿಸಿಕೊಡುತ್ತಾರೆಂದು.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ..........

ಶ್ರೀ ಎಂ. ವೀರಪ್ಪಮೊಯ್ಲಿ —ನಾನು ಕುಳಿತುಕೊಂಡಿಲ್ಲ ಅಧ್ಯಕ್ಷರೆ...........

ಅಧ್ಯಕ್ಷರು.—ನಾನು ಏನು ಮಾಡುವುದಕ್ಕಾಗುತ್ತದೆ? ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ಅವರು ಕುಳಿತುಕೊಳ್ಳದಿದ್ದರೆ ನಿಮಗೆ ಹೇಗೆ ಅವಕಾಶ ಮಾಡಿಕೊಡುವುದು? ನಮ್ಮ ಪರಿಸ್ಥಿತಿಯನ್ನೂ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮುಂಗಡ ಪತ್ರಕ್ಕೆ ಸಂಬಂಧಪಟ್ಟಂತೆ ನಾನು ಉತ್ತರಕೊಡುತ್ತಿದ್ದೆ. ಇವರ ಒಂದು ಪ್ರಚೋದನೆಯಿಂದಲೇ ನಾನು ರಾಜಕೀಯ ಉತ್ತರವನ್ನು ಕೊಡಬೇಕಾಯಿತು.

ಇನ್ನು ರೇಷ್ಮೆ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ. ಇದು ೮೦ ಕೋಟಿ ರೂಪಾಯಿಗಳ ಒಂದು ಯೋಜನೆ. ಇದಕ್ಕಾಗಿ ನಾವು ಈಗಾಗಲೇ ವಿಶ್ವಬ್ಯಾಂಕಿನಿಂದ ನೆರವನ್ನು ಪಡೆಯುವುದಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರದಿಂದ ಒಪ್ಪಿಗೆಯನ್ನೂ ಕೂಡ ಪಡೆದಿದ್ದೇವೆ. ಮತ್ತೆ ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ನಾವು ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆಯೂ ಕೂಡ ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಗ್ರಾಮೀಣ ಬ್ಯಾಂಕುಗಳು ಅಭಿವೃದ್ಧಿಗೆ ಬಹಳ ಯೋಗ್ಯವಾದಂಥವುಗಳು ಎಂಬುದು ತಮಗೂ ಗೊತ್ತಿದೆ. ಮೈಸೂರು ಜಿಲ್ಲೆಯಲ್ಲಿ ಅಂತಹ ಒಂದು ಗ್ರಾಮೀಣ ಬ್ಯಾಂಕು ಇದೆ. ಅವುಗಳು ಈ ದುರ್ಬಲವರ್ಗದವರಿಗೆ ವಿಶೇಷವಾದ ಸವಲತ್ತುಗಳನ್ನು ಕೊಡುತ್ತಿವೆ. ಅದಕ್ಕಾಗಿ ನಾವು ಇಲ್ಲಿ ಹೊಸದಾಗಿ ೯ ಗ್ರಾಮೀಣ ಬ್ಯಾಂಕುಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ನಾವು ಒಪ್ಪಿಕೊಂಡಿದ್ದೇವೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ಬ್ಯಾಂಕುಗಳನ್ನು ಪ್ರಾರಂಭ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಈ ೯ ಗ್ರಾಮೀಣ ಬ್ಯಾಂಕುಗಳ ಮುಖಾಂತರ ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ದುರ್ಬಲವರ್ಗದವರಿಗೆ ವಿಶೇಷವಾದ ಆರ್ಥಿಕ ಕಾರ್ಯಕ್ರಮಗಳನ್ನು ಒದಗಿಸಿಕೊಡುವುದಕ್ಕೆ ನಮ್ಮ ಸರ್ಕಾರ ಮುಂದೆ ಬಂದಿದೆ. ಇನ್ನೂ ಹೊಸದಾಗಿ ಅಂದರೆ ಕಮರ್ಷಿಯಲ್ ಬ್ಯಾಂಕುಗಳ ೧೫೦ ಬ್ರಾಂಚ್‌ಗಳನ್ನು ಈಗ ಎಲ್ಲೆಲ್ಲಿ ಇಲ್ಲವೋ ಅಂತಹ ಕಡೆಗಳಲ್ಲಿ ಪ್ರಾರಂಭ ಮಾಡುವುದಕ್ಕೆ ನಾವು ವಿಶೇಷವಾದ ಆಸಕ್ತಿಯನ್ನು ವಹಿಸಿ ರಿಜರ್ವ್ ಬ್ಯಾಂಕಿನವರೊಡನೆ ವ್ಯವಹರಿಸಿದ್ದೇವೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಇಷ್ಟು ಮಾತ್ರ ಅಲ್ಲದೆ ಸೋಷಿಯಲ್ ಫಾರೆಸ್ಟ್ರಿ ಪ್ರಾಜೆಕ್ಟ್ ಗ್ರಾಮೀಣ ಅಭಿವೃದ್ಧಿ ಯೋಜನೆ ಹಾಗೂ ಜಿಲ್ಲಾ ಅಭಿವೃದ್ಧಿ ಯೋಜನೆ ಇವಿಷ್ಟನ್ನು ತಯಾರು ಮಾಡಿ ವಿಶ್ವಬ್ಯಾಂಕಿಗೆ ನೆರವಿಗಾಗಿ ಕಳುಹಿಸಿದ್ದೇವೆ. ಈ ರೀತಿ ಹೊಸ ಯೋಜನೆಗಳನ್ನು ಕೂಡ ಜಾರಿಗೆ ತಂದು ಹೊಸ ಸಮಾಜವನ್ನು ನಿರೂಪಣೆ ಮಾಡುವುದರಲ್ಲಿ ಮಹತ್ವದ ಬೆಲೆಯನ್ನು ಕೊಡುತ್ತಿದ್ದೇವೆ.

ಇನ್ನು ಸಾರಿಗೆ ಇಲಾಖೆ ಬಗ್ಗೆ ಹೇಳುತ್ತೇನೆ. ಈ ಬಗ್ಗೆ ಹೆಚ್ಚಿನ ಸದಸ್ಯರುಗಳಿಂದ ಟೀಕೆಗಳು ಬಂದಿದೆ. ಮಾನ್ಯ ಭಾಸ್ಕರ್‌ನಾಯ್ಡು ಅವರೂ ಸಹಾ ಈ ಬಗ್ಗೆ ಸಾಕಷ್ಟು ವಿಚಾರ ಮಾಡಿ ವಿಮರ್ಶೆ ಮಾಡಿದ್ದಾರೆ. ಸಾರಿಗೆಯನ್ನು ನಾವು ಕೇವಲ ಆರು ತಿಂಗಳಿನಲ್ಲೇ ಸುಧಾರಣೆ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಈ ಸಾರಿಗೆ ಬಗ್ಗೆ ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂಬ ಬಗ್ಗೆ ನಾನು ಇಲ್ಲಿ ಹೇಳಬಯಸುತ್ತೇನೆ. For the first time the Commercial Banks have come forward to sanction Rupees thirteen and half crores in the current year for the reorganisation of the bu-es and the K.S.R.T.C. ಇದು ಒಂದು ಮಹತ್ವವಾದ ಹೆಜ್ಜೆಯೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಗಂಗಣ್ಣನವರು 'Monument of the function of the KSRTC ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇಂತಹ ಪರಿಸ್ಥಿತಿಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ನಾವು ವಿಶೇಷವಾದ ಯೋಜನೆಯನ್ನು ಮಾಡಿ ಈ ವರ್ಷ ೧೩½ ಕೋಟಿ ರೂಪಾಯಿಗಳನ್ನು ಬ್ಯಾಂಕಿನಿಂದ ತೆಗೆದುಕೊಳ್ಳುತ್ತಿದ್ದೇವೆ. ೧೯೮೦ ರ ಜನವರಿಯಿಂದ ಮಾರ್ಚ್‌ವರೆವಿಗೆ ೧೦೪ ಚಾಸಿಗಳನ್ನು ೧೫೬ ಲಕ್ಷ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿದ್ದೇವೆ. 119 buses being body built at a cost of Rs. 96 lakhs. ಬಸ್‌ಗಳ ಮಹತ್ವವನ್ನು ಅರಿತು ಏಪ್ರಿಲ್ ೧೯೮೦ ರಿಂದ ಜೂನ್ ೧೯೮೦ ರವರೆಗೆ ೨೪೦ ಲಕ್ಷ ರೂಪಾಯಿಗಳನ್ನು ಕೆ.ಎಸ್.ಆರ್.ಟಿ.ಸಿ. ಯವರಿಗೆ ೧೦೬ ಬಸ್‌ಗಳ ಚಾಸಿಗಳನ್ನು ಕೊಳ್ಳಲು ಕೊಟ್ಟಿದ್ದೇವೆ. ಈ ಪೀರಿಯಡ್‌ನಲ್ಲಿ ನಾವು ಸುಮಾರು ೧೪೯ ಲಕ್ಷ ರೂಪಾಯಿಯನ್ನು ಈ ಬಾಬಿಗಾಗಿ ಕೊಟ್ಟಿದ್ದೇವೆ. ಇದಲ್ಲದೆ ೭೧ ಲಕ್ಷ ರೂಪಾಯಿ ಮೌಲ್ಯದ ೮೯ ಚಾಸಿಗಳನ್ನು ಕೊಳ್ಳಲಾಗಿದೆ. ಈ ಬಗ್ಗೆ ಜೀವ ವಿಮಾ ಸಂಸ್ಥೆಯವರಿಂದ ೩೦೦ ಲಕ್ಷ ರೂಪಾಯಿಯ ಸಾಲವನ್ನು ಪಡೆದುಕೊಳ್ಳಲಾಗಿದೆ. ಈ ದಿಸೆಯಲ್ಲಿ ನಾವು ಪ್ರಗತಿಪರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು ಒಟ್ಟು ೧೬೮೪ ಚಾಸಿಗಳನ್ನು ಕೊಂಡುಕೊಳ್ಳುವ ಗುರಿ ಹೊಂದಿದ್ದೇವೆ. ೪೬೩ ಚಾಸಿಗಳನ್ನು ೩೧-೩-೧೯೮೧ರೊಳಗೆ ಕೊಂಡುಕೊಂಡಿದ್ದೇವೆ. ಇನ್ನುಳಿದ ೬೨೧ ಚಾಸಿಗಳಲ್ಲಿ ಈಗಾಗಲೇ ೧೦೯ ಚಾಸಿಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವೇ ದಿವಸಗಳಲ್ಲಿ ೨೦ ಹೊಸ ಮಹಡಿ ಬಸ್‌ಗಳು ಬರುವ ನಿರೀಕ್ಷೆ ಇದೆ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಒಂದು ತಿಂಗಳಿಗೆ ೭೦ ಚಾಸಿಗಳಂತೆ ಕೊಳ್ಳಲು ನಿರ್ಧರಿಸಿದ್ದೇವೆ. ಇದಕ್ಕೆ ಈಗಾಗಲೇ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಹನ್ನೆರಡೂವರೆ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಸಿಕ್ಕಿದೆ.

ಶ್ರೀ ಎಂ.ಸಿ. ನಾಣಯ್ಯ.—ಇದು ಸಹಾಯ ಧನವೇ ಅಥವಾ ಸಾಲವೇ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಹದಿಮೂರುವರೆ ಕೋಟಿ ರೂಪಾಯಿಗಳ ಸಾಲ ಕೊಡಲು ಕಮರ್ಷಿಯಲ್ ಬ್ಯಾಂಕ್‌ಗಳು ಒಪ್ಪಿಗೆ ನೀಡಿವೆ.

ಇನ್ನು ತೆರಿಗೆ ಬಗ್ಗೆ ಹೇಳಬೇಕಾದರೆ ಕೆಲವರು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪದಾರ್ಥಗಳ ಮೇಲೆ ಬೇರೆ ರಾಜ್ಯಗಳವರಿಗಿಂತಲೂ ಹೆಚ್ಚಿನ ತೆರಿಗೆಯನ್ನು ಹಾಕಲಾಗಿದೆಯೆಂದು ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟರು. ಇದೇ ರೀತಿ ಸಾರ್ವಜನಿಕರಿಂದಲೂ ಸಹಾ ಮನವಿಗಳು ಬಂದಿದ್ದು ಅವುಗಳನ್ನು ನಾವು ಸಂಗ್ರಹಿಸಿದ್ದೇವೆ. ಅವುಗಳ ಬಗ್ಗೆಯೂ ನಾವು ವಿಚಾರ ಮಾಡಿದ್ದೇವೆ. ಒಬ್ಬ ಮಾನ್ಯ ಸದಸ್ಯರು ಕೆಲವು ಐಟಂಗಳ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿದ್ದು ಅವನ್ನು ಕಡಿಮೆ ಮಾಡಬೇಕೆಂದರು. ಅಧ್ಯಕ್ಷರೆ, ನಾವು ಬೈಸಿಕಲ್ ಟ್ಯಾಕ್ಸ್‌ನ್ನು ತೆಗೆದುಹಾಕಿಬಿಟ್ಟಿದ್ದೇವೆ. ಈಗಿನ ಕಾಲದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಜಾಸ್ತಿಯಾಗುತ್ತಿರುವುದರಿಂದ ಸೈಕಲ್‌ಗಳ ಮಹತ್ವವನ್ನರಿತು ಜನಸಾಮಾನ್ಯರ ಸಾಮಾನ್ಯ ವಾಹನವಾದ ಬೈಸಿಕಲ್ ಮೇಲಿನ ತೆರಿಗೆಯನ್ನು ನಾವು ತೆಗೆದುಹಾಕಿಬಿಟ್ಟಿದ್ದೇವೆ. ಕೇಂದ್ರ ಸರ್ಕಾರದವರನ್ನೂ ಸಹಾ ಇದರ ಮೇಲಿನ ಎಕ್ಸೈಸ್ ಡ್ಯೂಟಿಯನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳಲಾಗಿ ಅವರೂ ಸಹಾ ಡ್ಯೂಟಿಯನ್ನು ತೆಗೆದುಹಾಕಿಬಿಟ್ಟಿದ್ದಾರೆ. ಇದು ಒಂದು ಬಹಳ ಸಂತೋಷದ ವಿಷಯ. ಹಾಗೂ ಇನ್ನಿತರ ವಸ್ತುಗಳ ಮೇಲೆ ಹಾಕಿರುವ ತೊಂದರೆಯಿಂದೇನೂ ಜನಸಾಮಾನ್ಯರಿಗೆ ತೊಂದರೆಯಾಗಲಿಕ್ಕಿಲ್ಲ. ಡ್ರಗೆಟುಗಳು, ಕಾರ್ಪೆಟುಗಳು ಮುಂತಾದವುಗಳ ಮೇಲೆ ಸರಿಯಾದಂತಹ ತೆರಿಗೆಯನ್ನೇ ಹಾಕಿದ್ದೇವೆ. ಇವುಗಳ ಮೇಲೆ ಶೇಕಡಾ ೨ ಇದ್ದುದನ್ನು ಶೇಕಡಾ ೫ಕ್ಕೆ ಏರಿಸಿದ್ದೇವೆ. ತಮಿಳುನಾಡಿನಲ್ಲಿ ಇದಕ್ಕೆ ೧೫ ಪರ್ಸೆಂಟ್ ಇದೆ. ಆಂಧ್ರ ಪ್ರದೇಶದಲ್ಲಿ ಶೇಕಡಾ ೧೦ ಇದೆ. ಇವುಗಳನ್ನು ತುಲನೆ ಮಾಡಿದರೆ ನಾವು ಹಾಕಿರತಕ್ಕದ್ದೇನೂ ಹೆಚ್ಚಿನದಲ್ಲ. ನಾವು ಸೈಕಲ್ ಮೇಲಿನ ತೆರಿಗೆಯನ್ನು ಹಿಂತೆಗೆದುಕೊಂಡಿದ್ದೇವೆ. ಹಾಗೇ ಯಂತ್ರಗಳ ಬಿಡಿ

ಭಾಗಗಳು ಮತ್ತು ಉಪಕರಣಗಳ ಮೇಲೆ ವಿಧಿಸಿದ ತೆರಿಗೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಇನ್ನು ಅರ್ರ್ಯಾಕ್ ಬಗ್ಗೆ ಹೇಳ ಬೇಕಾದರೆ ಇದಕ್ಕೆ ೮ ಪರ್ಸೆಂಟ್ ಟ್ಯಾಕ್ಸ್ ಹಾಕಲಾಗಿದೆ. ತಮಿಳುನಾಡಿನಲ್ಲಿ ಶೇಕಡಾ ೬% ತೆರಿಗೆ ಇದೆ, ಆಂಧ್ರಪ್ರದೇಶದಲ್ಲಿ ಶೇಕಡ ೧೦, ಕೇರಳದಲ್ಲಿ ಶೇಕಡ ೧೨, ಮಹಾರಾಷ್ಟ್ರದಲ್ಲಿ ಶೇಕಡ ೧ ತೆರಿಗೆ ಇದೆ. ಆದುದರಿಂದ ನಾವು ಹಾಕಿರತಕ್ಕದ್ದು ಹೆಚ್ಚೇನು ಆಗುವುದಿಲ್ಲ. ಇನ್ನು ಹೊಸೈಯರಿ ಸರಕುಗಳನ್ನು ಹೊರತುಪಡಿಸಿ ಸಿದ್ಧಪಡಿಸಿದ ಉಡುಪುಗಳ ಮೇಲೆ ತೆರಿಗೆಯನ್ನು ಶೇಕಡಾ ೫ಕ್ಕೆ ಏರಿಸಲಾಗಿದೆ. ಈ ಬಗ್ಗೆ ತಮಿಳುನಾಡಿನಲ್ಲಿ ಶೇಕಡಾ ೫, ಆಂಧ್ರದಲ್ಲಿ ಶೇಕಡಾ ೪, ಕೇರಳದಲ್ಲಿ ಶೇಕಡಾ ೫, ಮಹಾರಾಷ್ಟ್ರದಲ್ಲಿ ಶೇಕಡಾ ೫ ತೆರಿಗೆ ಇದೆ. ನಾವು ಅದಷ್ಟು ಮಟ್ಟಿಗೆ ನಮ್ಮ ನೆರೆ ರಾಜ್ಯಗಳಿಗೆ ಸಮಸ್ವರೂಪವಾಗುವಂತೆ ತೆರಿಗೆ ಮಟ್ಟವನ್ನು ಇಟ್ಟುಕೊಂಡಿದ್ದೇವೆ. ಈ ಬಗ್ಗೆ ಸಾಕಷ್ಟು ಮನವಿಗಳೂ ಬಂದಿದ್ದು, ಮಾನ್ಯ ಬೊಮ್ಮಾಯಿಯವರು ಸಹಾ ಇದರತೆರಿಗೆಯನ್ನು ಕಡಿಮೆ ಮಾಡಬೇಕು ಇಲ್ಲದಿದ್ದರೆ ಟ್ರೇಡ್ ಮೂವ್‌ಮೆಂಟಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಆದರೆ ಈ ಬಗ್ಗೆ ನೆರೆ ರಾಜ್ಯಗಳಿಗೆ ನಾವು ಹೋಲಿಸಿ ಪರಿಶೀಲನೆ ಮಾಡಿದಾಗ, ಬಹುಶಃ ಕಡಿಮೆ ಮಾಡುವುದು ಸರಿಯಲ್ಲವೆಂದು ಅದೇ ಒಂದು ಮಟ್ಟದ ತೆರಿಗೆಯನ್ನು ಕಾದಿರಿಸಿಕೊಂಡು ಬಂದಿದ್ದೇವೆ. ಇನ್ನು ರಬ್ಬರ ಹಾಗೂ ಇತರ ಟೈರುಗಳಿಗೆ ನಾವು ಶೇಕಡಾ ೧೦ ತೆರಿಗೆಯನ್ನು ವಿಧಿಸಿದ್ದೇವೆ. ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಶೇಕಡಾ ೧೦, ತೆರಿಗೆ ಇದೆ. ಆದ್ದರಿಂದ ಈ ಬಗ್ಗೆ ನಾವು ತಲೆಹಾಕುವುದು ಸರಿಯಲ್ಲವೆಂದು ನಿರ್ಧರಿಸಿದ್ದೇವೆ. ಇನ್ನು ಪೆಟ್ರೋಲ್ ಬಗ್ಗೆ ಹೇಳಬೇಕಾದರೆ It is 15% in our State and in Kerala. In Tamil Nadu it is 21 paise per Litre. I feel it is not considerably very high. By and large we are on par with other States. I don't think that we should interfere with this. ಇನ್ನು ಮೋಟಾರ್ ಡೀಸೆಲ್ ಬಗ್ಗೆ ಹೇಳ ಬೇಕಾದರೆ It is 16% in Karnataka, 15 paise per litre in Tamil Nadu, 10% in A.P. and 20% in Kerala. In Maharastra it is 5%. I do not think we need to interfere with this. ತೊಗಲುಗಳು ಮತ್ತು ಚರ್ಮಗಳು, ಅವುಗಳು ಕಚ್ಚಾ ಸ್ಥಿತಿಯಲ್ಲಿರಲಿ ಅಥವಾ ಸಿದ್ಧಪಡಿಸಿದವುಗಳಾಗಿರಲಿ ಅವುಗಳ ಮೇಲೆ ಶೇಕಡಾ ೪ರಷ್ಟು ತೆರಿಗೆ ವಿಧಿಸಲಾಗಿದೆ. ಈ ತೆರಿಗೆಗಳನ್ನೆಲ್ಲಾ ನಾವು ಎಚ್ಚರಿಕೆಯಿಂದ ಪರಿಶೀಲನೆ ಮಾಡಿ ಹಾಕಿದ್ದೇವೆ. ಅರಕ ನಟ್ ಮೇಲೆ ಹಾಕಿರುವ ತೆರಿಗೆ ಬಗ್ಗೆ ಮಲೆನಾಡು ಪ್ರದೇಶಗಳಾದ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ದಿಂದ ಸಾಕಷ್ಟು ಮನವಿಗಳು ಬಂದಿವೆ. ಇದರಿಂದ ನಮ್ಮ ವ್ಯಾಪಾರವೇ ಸ್ಥಗಿತವಾಗುವುದರ ಜೊತೆಗೆ ಬರತಕ್ಕ ಆದಾಯ ಕಡಿಮೆಯಾಗಿ ಟ್ಯಾಕ್ಸ್ ಇವೇಷನ್ ಜಾಸ್ತಿಯಾಗುತ್ತದೆ; ಎಂದು ಹೇಳಿದ್ದಾರೆ. ಆದ್ದರಿಂದ ಇದರ ಮೇಲೆ ಶೇಕಡಾ ೫ ತೆರಿಗೆ ಹಾಕಿದ್ದನ್ನು ಶೇಕಡಾ ೪ಕ್ಕೆ ಇಳಿಸಬೇಕೆಂದು ನಾವು ಆಲೋಚನೆ ಮಾಡಿದ್ದೇವೆ. ಇನ್ನು ಗೋಡಂಬಿ ಬಗ್ಗೆ ಹೇಳಬೇಕಾದರೆ ಈ ಬೆಳೆ ನಮ್ಮ ರಾಜ್ಯ ಹಾಗೂ ಕೇರಳದಲ್ಲಿ ಪ್ರಮುಖವಾಗಿ ವ್ಯಾಪಾರವಾಗತಕ್ಕಂತಹ ಬೆಳೆ. ಈ ತೆರಿಗೆಯನ್ನು ಆರು ಪರ್ಸೆಂಟ್‌ನಿಂದ ಐದು ಪರ್ಸೆಂಟ್‌ಗೆ ಇಳಿಸಬೇಕೆಂದೂ ಕೂಡ ಆಲೋಚನೆ ಮಾಡಿದ್ದೇವೆ ಟ್ವಿಸ್ಟೆಡ್ ಮತ್ತು ತ್ರೋನ್ ಸಿಲ್ಕ್ ಬಗ್ಗೆಯೂ ಎರಡು ಪರ್ಸೆಂಟ್‌ನಿಂದ ಒಂದು ಪರ್ಸೆಂಟಿಗೆ ಇಳಿಸಬೇಕೆಂದು ನಾವು ಆಲೋಚನೆ ಮಾಡಿದ್ದೇವೆ. ಆದ್ದರಿಂದ ವಿನಾಯಿತಿ ಇಲ್ಲದೆ ಬೇರೆ ಬೇರೆ ಇರತಕ್ಕಂಥ ತೆರಿಗೆಗಳನ್ನು ಒಂದು ಸ್ಥಿಮಿತ ಮಟ್ಟಕ್ಕೆ ಇರಿಸಬೇಕೆಂದು ಕೂಡ ನಾವು ಆಲೋಚನೆ ಮಾಡಿದ್ದೇವೆ. ಕಬ್ಬು ಕತ್ತರಿಸುವವರಿಂದಲೂ ಕೂಡ ಮನವಿಗಳು ಬಂದಿವೆ. They have called onus in a big delegation ಪರ್ಚೇಸ್ ಟ್ಯಾಕ್ಸ್ ವಿಚಾರದಲ್ಲಿ ನಾವು ಅವರಿಗೆ equitable rate ಕೊಡಬೇಕೆಂದಿದ್ದೇವೆ. ಪರ್ಚೇಸ್ ದರ ಕಡಿಮೆ ಮಾಡಬೇಕೆಂದು ಅವರ ಬೇಡಿಕೆ ಇದೆ. There is lot of force in their representation. It is being considered by the Government.

SRI B. B. SAYANAK.—Sugar lobby......

SRI M. VEERAPPA MOILY.—Not sugar lobby. It is the growers *i.e.*, Agriculturists who have represented, ಪರ್ಚೇಸ್ ಟ್ಯಾಕ್ಸ್ ವಿಚಾರದಲ್ಲಿಯೂ ಕೂಡ ನಮ್ಮ ಉದ್ದೇಶ ಕೆಲವು ಸಾರಿ ವಿನಾಯಿತಿ ಕೊಡಬೇಕೆಂದಿರುತ್ತದೆ. ಯಾವುದೇ ರೀತಿಯಾದ ವಿನಾಯಿತಿ ಕೊಡುವಾಗಲೂ ಫ್ಯಾಕ್ಟರಿಯವರಿಗೆ ಸಿಗದೆ ಕಬ್ಬು ಬೆಳೆಗಾರರಿಗೆ ಸಿಗುವಂತೆ ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೃಷಿಕರ ವಿಚಾರದಲ್ಲಿ ಬೇರೆ ರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ಈ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಕ್ಕೂ ಕೂಡ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. - ಹೋದ ಸಲ ನಾನು ವಿರೋಧಪಕ್ಷದ ನಾಯಕನಾಗಿ ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಆಗಿನ ಸರ್ಕಾರಕ್ಕೆ ರೈತರ ಬಗ್ಗೆ ಹನ್ನೆರಡು ಬೇಡಿಕೆಗಳನ್ನು ಇಟ್ಟಿದ್ದೆ. ಅದರಲ್ಲಿ ಮುಖ್ಯವಾದುವು (:) Waiver of debts due from small holders ; (2) Reduction of sales tax on agricultural implements, inputs, pesticides and other necessities : (3) Waiver of penal interest on the Advance to the agriculturiests by Government, Co.operative institutions and other financing agencies : (4) Postponement of recovery of debts due from farmers to the Goverum:nt and various Financing agencies : (5) Reduction of water charges : (6) Postponement of payment of water rate and betterment levy : (7) Abolition of purchase tax on sugarcane. ಸ್ವಾಮಿ ನಾವು ಬೇರೆ ಬೇರೆ ರಾಜ್ಯಗಳ ಸರ್ಕಾರದ ಆರ್ಗನೈಸ್ ಬಗ್ಗೆ ಹೋಲೀಸಿ ಹೇಳಿದ್ದೇವೆ. ಹೋದ ಬಡ್ಜೆಟ್‌ನಲ್ಲೂ ಕೂಡ ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಕೇರಳ ಸರ್ಕಾರಗಳು ರೈತರಿಗೆ ತುಂಬಾ ಸವಲತ್ತುಗಳನ್ನು ತೋರಿಸಿದ್ದಾರೆ. ತಮಿಳುನಾಡು ಬಡ್ಜೆಟ್ ನೋಡಿದ್ದೇವೆ. ಅಲ್ಲಿ ಅವರು ರೈತರಿಗೆ ಕೊಟ್ಟಿದ್ದ ಸುಮಾರು ೬೦ ಕೋಟಿ ರೂಪಾಯಿಗಳ ಸಾಲವನ್ನು ಬಿಟ್ಟು ಬಿಟ್ಟಿದ್ದಾರೆ. ಮಹಾರಾಷ್ಟ್ರ ನಮಗಿಂತ ಮುಂದಿದೆ. ಅವರು ಸಣ್ಣ ರೈತರಿಂದ ಬರಬೇಕಾದ ಎಲ್ಲಾ ಸಾಲಗಳಲ್ಲಿಯೂ ವಿನಾಯಿತಿ ತೋರಿಸಿದ್ದಾರೆ. Penal interest wave ಮಾಡಿರುತ್ತಾರೆ. ಅದರ ಜೊತೆಗೆ ತಮ್ಮ ಭಾಷಣದಲ್ಲಿ ರೈತರ ಹಿತದೃಷ್ಟಿಯಿಂದ ಜೋಳ, ಭತ್ತ ಇದನ್ನು ಪರ್ಚೇಸ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಿಲ್ಲ. ಇಡೀ ರಾಜ್ಯದಲ್ಲಿ ಹತ್ತಿ ಬೆಳೆಯ ತಕ್ಕಂಥ ರೈತರು ಅರ್ಧಭಾಗದಲ್ಲಿ ಇದ್ದಾರೆ. ಅವರಿಗೆ ಏನು ಅನುಕೂಲತೆ ಮಾಡಿಲ್ಲ. ಬಡ್ಜೆಟ್ ಉತ್ತರದಲ್ಲಿ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು. ಶ್ರೀ ದೇವರಾಜ ಅರಸ್‌ರವರನ್ನು anty farmers anty rural development, anty rural Government ಎಂದು ಹೇಳುತ್ತಿರಬೇಕಾದರೆ ನಿಮ್ಮ ಸರ್ಕಾರ ಬಂದು ೬ ತಿಂಗಳಾಯಿತು. ಸರ್ಕಾರ ರೈತರ ಪರಿಸ್ಥಿತಿಯನ್ನು ತಿಳಿದು ಕೊಂಡು ಬಡ್ಜೆಟ್‌ನಲ್ಲಿ ಯಾವರೀತಿ ಸೌಕರ್ಯಗಳನ್ನು ಕೊಡಲಿಕ್ಕೆ ವಿಚಾರ ಮಾಡಿದ್ದೀರೆಂದು ಕೇಳುತ್ತೇನೆ. It shows you have no mind to help the farmers and the rural people. We have to iufer like that ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಿ ಉತ್ತರ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ನೀತಿಯ ಬಗ್ಗೆ ಉತ್ತರ ಹೇಳುವುದಾದರೆ, ರೂರಲ್ ಅಗ್ರಿಕಲ್ಚರಲ್ ತಾವು ಯಾವ ವಾದ ಹೇಳಿದ್ದೀರಿ ಅದರ ಬಗ್ಗೆ ಸರ್ಕಾರ ಚಿಂತನೆಯಲ್ಲಿದೆ. ಕೆಲವೇ ದಿವಸಗಳಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ದಿವಸಗಳು ಎಂದರೆ ಇನ್ನು ಎಷ್ಟು ದಿವಸಗಳಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಈಗಾಗಲೇ ಎಲ್ಲ ಸರ್ಕಾರಗಳು ರೈತರಿಗೆ ಸೌಕರ್ಯಗಳನ್ನು ಒದಗಿಸಿಕೊಟ್ಟಿವೆ.

ಶ್ರೀ ಎಚ್.ಡಿ. ದೇವೇಗೌಡ.—ಸರ್ಕಾರದ ಧೋರಣೆ ಏನು ಇದೆಯೋ ಅದನ್ನು ಕಾದು ನೋಡೋಣ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ ಮಾನ್ಯ ಸ್ನೇಹಿತರು ಹೇಳಿದಂತೆ ಬೇರೆ ರಾಜ್ಯಗಳಲ್ಲಿ ವ್ಯವಸಾಯಗಾರರಿಗೆ ಏನೇನು ಸವಲತ್ತುಗಳನ್ನು ಕೊಡಬೇಕೋ ಅವುಗಳನ್ನೆಲ್ಲ ಕೊಟ್ಟಿರುವುದರಿಂದ ತಾವು ಆ ಬಗ್ಗೆ ತಾತ್ಕಾಲಿಕವಾಗಿ ಒಂದು ನಿರ್ಣಯ ಮಾಡಲಿಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ. ರೈತರಿಗೆ ಬಾವಿಗಳಲ್ಲಿ ನೀರು ಬಾರದಿದ್ದರೆ ದುಡ್ಡನ್ನು ವಾಪಸ್ ಕೊಡುವುದಾಗಿ ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಅಂಟುಲೆ ಸರ್ಕಾರವಾಗಲಿ, ಕಾಂಗ್ರೆಸ್ ಸರ್ಕಾರವಾಗಲಿ, ಎಂ. ಜಿ. ರಾಮಚಂದ್ರನ್‌ರವರ ಸರ್ಕಾರ ವಾಗಲೀ ಯಾರೇ ಏನೇ ಕೊಟ್ಟಿರಲಿ

ಅದನ್ನು ಮುಂದೆ ವಿಚಾರ ಮಾಡೋಣ. ಈಗ ನೀವು ಹೇಳಿದಹಾಗೆ ನೀರು ಬಾರದಿರುವ ಕಡೆ ಹಣ ವಾಪಸ್ ಕೊಡಲಿಕ್ಕೆ ಹೋಗುತ್ತೀರಾ ಎಂದು ಕೇಳುತ್ತೇನೆ. ಏತಕ್ಕೆಂದರೆ ಈಗಾಗಲೇ ನೋಟಿಸ್‌ಗಳನ್ನು ಕೊಟ್ಟು ಜಪ್ತಿ ಮಾಡಲಿಕ್ಕೆ ಹೊರಟಿದ್ದಾರೆ. ಬಾವಿಗಳನ್ನು ತೋಡಿ ನೀರು ಬಾರದಿರುವ ರೈತರಿಗೆ ನೀವು ಕೊಟ್ಟಿರತಕ್ಕಂಥ ಸಾಲದ ಹಣವನ್ನು ಮನ್ನಾ ಮಾಡಲಿಕ್ಕೆ ಸರ್ಕಾರದವರು ಆದಷ್ಟು ಬೇಗ ವ್ಯವಸ್ಥೆ ಮಾಡಿದರೆ ಸಾಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ ರೈತರಿಗೆ ಯಾವ ರೀತಿಯಾದ ಸಹಾಯವನ್ನು ಮಾಡುತ್ತೇವೆ. ಅವರ ಬಗ್ಗೆ ಯಾವ ನೀತಿಯನ್ನು ಅನುಸರಿಸುತ್ತೇವೆ, ಅವರಿಗೆ ಯಾವರೀತಿ ವಿನಾಯಿತಿಯನ್ನು ಕೊಡುತ್ತೇವೆನ್ನುವುದನ್ನು ಇದೇ ಆಯವ್ಯಯ ಅಧಿವೇಶನದಲ್ಲಿ ಹೇಳುತ್ತೇವೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಹೇಳುವ ಮೊದಲೇ ನಮ್ಮ ಸರ್ಕಾರ ಆ ಬಗ್ಗೆ ಚಿಂತನೆ ಮಾಡಿದೆ. ಬಡ್ಜೆಟ್ ಸೆಷನ್ ಮುಗಿಯುವ ಮೊದಲೇ ಸ್ಪಷ್ಟವಾದ ಹೇಳಿಕೆಯನ್ನು ಈ ಸಭೆಯಲ್ಲಿ ನಾವು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಅವರು ಡಿಸ್ಟ್ರೆಸ್ ಸೇಲ್ಸ್ ಎಂದು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಡಿಸ್ಟ್ರೆಸ್ ಸೇಲ್ಸ್ ಅಗತ್ಯ ಇದೆ. ೧೫ ದಿವಸಗಳಲ್ಲಿ ಬತ್ತ ಬೆಂಗಳೂರು ಸೇರಿದಮೇಲೆ ನೀವು ಏನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಫುಡ್ ಕಾರ್ಪೊರೇಷನ್‌ನವರು ಅವರಿಗೆ ದುಡ್ಡು ಕೊಡುತ್ತಿಲ್ಲ. ರೈತರಿಗೆ ಫರ್ಟಿಲೈಸರ್ಸ್ ಸಿಕ್ಕುತ್ತಿಲ್ಲ. ಎರಡು ಮೂರು ದಿವಸದಲ್ಲಿಯೇ ಹಣವನ್ನು ಒದಗಿಸಿ ರೈತರಿಗೆ ಸಹಾಯ ಮಾಡಿದರೆ ಏನಾದರೂ ಪ್ರಯೋಜನವಾದೀತು ಎಂದು ಹೇಳುತ್ತೇನೆ.

5-00 P.M.

SRI M. VEERAPPA MOILY.—Sir, this is the commitme t of the Government and we will take appropriate steps.

